# ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 50-51 | ಡಿಸೆಂಬರ್ 16, 1984 | ಬೆಲೆ 60 ಪೈಸೆ.


## ಕಾಂಗ್ರೆಯನ್ನು ಸೋಲಿಸಿರಿ

## ಸಿಪಿಐ (ಎಂ), ಸಿಪಿಐ, ದಮಕಿ, ಜನತಾ ಪಕ್ಷಗಳ ಉಮೇದುವಾರರನ್ನು ಗೆಲ್ಲಿಸಿರಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಕರ್ನಾಟಕ ರಾಜ್ಯ ಸಮಿತಿಯ ಸೆಕ್ರೆಟಾರಿಯೇಟ್ ಸಭೆ 2-12-84 ರಂದು ಬೆಂಗಳೂರಿನಲ್ಲಿ ಸೇರಿ ಕರ್ನಾಟಕದಲ್ಲಿಯ 23 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿರುವ ಜನತಾ ಪಕ್ಷದ, ಚಿಕ್ಕಮಗಳೂರಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ, ಶಿವಮೊಗ್ಗ, ಬೀದರ್‌ಗಳಲ್ಲಿ ದಲಿತ ಮಜದೂರ್ ಕಿಸಾನ್ ಪಕ್ಷದ ಹಾಗೆಯೇ ಉಡುಪಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉಮೇದ್ವಾರರನ್ನು ಪ್ರಚಂಡ ಬಹುಮತದಿಂದ ಆರಿಸಿ ತರಬೇಕೆಂದೂ, ಇಂದಿರಾ ಕಾಂಗ್ರೆಸ್, ಭಾರತೀಯ ಜನತಾ ಪಕ್ಷದ ಉಮೇದ್ವಾರರನ್ನು ಸೋಲಿಸಬೇಕೆಂದೂ ಕರೆ ನೀಡಿದೆ.

3-12-84 ರಂದು ಮಂಗಳೂರಿನಲ್ಲಿ ಸೇರಿದ ಪಕ್ಷದ ರಾಜ್ಯ ಸಮಿತಿ ಸಭೆ ವಿರೋಧ ಪಕ್ಷಗಳ ನಿಲುಮೆಗಳನ್ನು ಪರಾಮರ್ಷಿಸಿ ಚಿಕ್ಕಮಗಳೂರಿನಲ್ಲಿ ಸ್ಪರ್ಧಿಸುತ್ತಿರುವ ಭಾರತ ಕಮ್ಯುನಿಸ್ಟ್ ಪಕ್ಷದ ಉಮೇದ್ವಾರರಿಗೆ ಬೆಂಬಲ ನೀಡಬೇಕೆಂದೂ, ಎನ್. ಡಿ. ನಂಜುಂಡಸ್ವಾಮಿಯವರ ನೇತೃತ್ವದಲ್ಲಿರುವ ರಾಜ್ಯ ರೈತ ಸಂಘದ ಉಮೇದ್ವಾರರಿಗೆ ಬೆಂಬಲ ನೀಡಬಾರದೆಂದೂ ನಿರ್ಧರಿಸಿತ್ತು. ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಉಡುಪಿಯಲ್ಲಿ ಭಾರತೀಯ ಜನತಾ ಪಕ್ಷದ ಚುನಾವಣಾ ಪ್ರಚಾರದ ಉದ್ಘಾಟನೆ ಮಾಡಿರುವುದನ್ನು ರಾಜ್ಯ ಸಮಿತಿ ಗಮನಕ್ಕೆ ತೆಗೆದುಕೊಂಡು ಅವರ ಆಕ್ರಮಕ್ಕೆ ತನ್ನ ಅಸಮಾಧಾನವನ್ನು ವ್ಯಕ್ತ ಮಾಡಿತ್ತು. ತಮಗೆ ಬೆಂಬಲ ನೀಡಬೇಕೆಂದು ಜನತಾ ಪಕ್ಷದಿಂದ ನಿರ್ದಿಷ್ಟ ವಿನಂತಿ ಪತ್ರ ಬಂದ ನಂತರ ಅವರಿಗೆ ಬೆಂಬಲ ನೀಡುವ ಕುರಿತು ನಿರ್ಣಯ ತೆಗೆದು ಕೊಳ್ಳುವ ಅಧಿಕಾರವನ್ನು ರಾಜ್ಯ ಸಮಿತಿಯು ಸೆಕ್ರೆಟಾರಿಯೇಟಿಗೆ ಒಪ್ಪಿಸಿತ್ತು.

ಆ ನಿರ್ಣಯದ ಪ್ರಕಾರ 9-12-84 ರಂದು ಸೆಕ್ರೆಟಾರಿಯೇಟ್ ಸಭೆ ಬೆಂಗಳೂರಿನಲ್ಲಿ ಸೇರಿ, ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ಜನತಾ ಅಧ್ಯಕ್ಷ ದೇವೇಗೌಡ, ದಲಿತ ಮಜ್ದೂರ್ ಕಿಸಾನ್ ಪಕ್ಷದ ಅಧ್ಯಕ್ಷ ತುಳಸಿದಾಸಪ್ಪ, ರಾಷ್ಟ್ರೀಯ ಸಂಜಯ ಮಂಚದ ಕಾರ್ಯದರ್ಶಿ ನಾರಾಯಣ ರೆಡ್ಡಿ ಅವರಿಂದ ಬಂದ ಪತ್ರಗಳನ್ನೂ, ದೇವೇಗೌಡರು ಸೂರ್ಯನಾರಾಯಣ ರಾವ್ ಅವರ ಜೊತೆಯಲ್ಲಿ ಚರ್ಚಿಸಿದ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು ಜನತಾ, ಸಿ.ಪಿ.ಐ., ಸಿ.ಪಿ.ಐ. [ಎಂ] ಪಕ್ಷಗಳು 1983ರ ವಿಧಾನಸಭೆ ಚುನಾವಣೆಯಲ್ಲಿ ರಚಿಸಿಕೊಂಡ ರಂಗ ಈಗಲೂ ಮುಂದುವರಿಯುವುದೆಂದೂ, ಬಿಜೆಪಿ ಜೊತೆಯಲ್ಲಿ ಬರೇ ಸ್ಥಾನಗಳ ಹೊಂದಾಣಿಕೆಯನ್ನಷ್ಟೇ ಮಾಡಿಕೊಳ್ಳಲಾಗಿದೆಂದೂ, ಸಿ.ಪಿ.ಐ. [ಎಂ] ಗೆ ಒಂದು ಸ್ಥಾನ ಬಿಟ್ಟು ಕೊಡಲಿಕ್ಕೆ ಅಸಮರ್ಥವಾಗಿರುವುದು ವಿಶಾದನೀಯವೆಂದೂ ಜನತಾ ಅಧ್ಯಕ್ಷ ದೇವೇಗೌಡರು ಹೇಳಿದ್ದನ್ನೂ ಕಮಿಟಿ ಗಮನಕ್ಕೆ ತೆಗೆದುಕೊಂಡಿತು. ಈ ಚುನಾವಣೆಯಲ್ಲಿ ನಮ್ಮ ಪಕ್ಷ ಯಾರಿಗೆ ಬೆಂಬಲ ನೀಡಬೇಕೆಂದು ನಿರ್ಣಯಿಸಿತು.


ಇಂದಿರಾ ಕಾಂಗ್ರೆಸ್ಸನ್ನೂ, ಜಾತೀಯ ಶಕ್ತಿಗಳನ್ನೂ ಸೋಲಿಸಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಆರಿಸಿ ಬರುವಂತೆ ಮಾಡಬೇಕೆಂಬ ಸಿಪಿಐ (ಎಂ) ಕೇಂದ್ರ ಸಮಿತಿಯ ಆದೇಶದಂತೆ ಕರ್ನಾಟಕದಲ್ಲಿ ಜನತಾ ಪಕ್ಷ ಸ್ಪರ್ಧಿಸುವ ಎಲ್ಲಾ ಕ್ಷೇತ್ರಗಳಲ್ಲೂ ಆ ಪಕ್ಷದ ಉಮೇದುವಾರರ ಪರವಾಗಿ, ಚಿಕ್ಕಮಗಳೂರಿನಲ್ಲಿ ಸಿಪಿಐ ಪರವಾಗಿ, ಶಿವಮೊಗ್ಗ ಮತ್ತು ಬೀದರ್‌ನಲ್ಲಿ ದಮಕಿ ಪಕ್ಷದ ಉಮೇದ್ವಾರರ ಪರವಾಗಿ ನಮ್ಮ ಪಕ್ಷದ ಎಲ್ಲ ಘಟಕಗಳೂ, ಸದಸ್ಯರೂ, ಹಿತೈಷಿಗಳೂ ದುಡಿಯಬೇಕೆಂದು ನಿರ್ಣಯಿಸಿತು.

ನಮ್ಮ ಪಕ್ಷ ರಾಜಕೀಯ ನಿಲುಮೆಯನ್ನು ಜನರಿಗೆ ಮನದಟ್ಟು ಮಾಡಿಕೊಡಲು ನಮ್ಮ ಗೆಳೆಯ ಪಕ್ಷಗಳ ಉಮೇದ್ವಾರರ ಪರವಾಗಿ ಚುನಾವಣಾ ಪ್ರಚಾರ ಮಾಡಲು ಸೂರ್ಯನಾರಾಯಣರಾವ್ ಮತ್ತು ನಂಜುಂಡಪ್ಪನವರು ಮೈಸೂರು, ಮಂಡ್ಯ, ಕೋಲಾರ, ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲೂ, ವಿ.ಜೆ.ಕೆ. ನಾಯರ್, ವಿ. ಎನ್. ಹಳಕಟ್ಟಿ ಮತ್ತು ಮುಹಮ್ಮದ್ ದಸ್ತಗೀರ್ ಅವರು ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಬೀದರ್, ಬಿಜಾಪುರ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳನ್ನೂ, ರಾಮಚಂದ್ರರಾವ್ ಮತ್ತು ಎನ್. ಕೆ. ಉಪಾಧ್ಯಾಯರು ಉಡುಪಿ ಕ್ಷೇತ್ರದಲ್ಲೂ ಪ್ರಚಾರ ಮಾಡಬೇಕೆಂದು ನಿರ್ಣಯಿಸಲಾಯಿತು.

ಚುನಾವಣೆಯ ಹೋರಾಟ ನಮ್ಮ ರಾಜಕೀಯ ಹೋರಾಟದ ಮುಂದುವರಿಕೆಯಾಗಿರುವುದರಿಂದ ನಮ್ಮ ಪಾರ್ಟಿ ಸದಸ್ಯರೂ ಸಹಾನುಭೂತಿದಾರರೆಲ್ಲ ಇಂದಿರಾ ಕಾಂಗ್ರೆಸ್ ಮತ್ತು ಬಿಜೆಪಿಯ ಸೋಲಿಗಾಗಿ ಹೃತ್ಪೂರ್ವಕವಾಗಿ ಕೆಲಸ ಮಾಡಬೇಕೆಂದು ಸೆಕ್ರೆಟಾರಿಯೇಟ್ ಕರೆ ಕೊಟ್ಟಿದೆ.

### ಪ್ರಕಟನೆ

ಕೆಲವು ಅನಿವಾರ್ಯ ಕಾರಣಗಳಿಂದಾಗಿ ಐಕ್ಯರಂಗ 9-12-84 ರ ಸಂಚಿಕೆ ಪ್ರಕಟವಾಗಲಿಲ್ಲ. ಅದಕ್ಕಾಗಿ ವಿಷಾದಿಸುತ್ತೇವೆ.



### ಉಡುಪಿ ಲೋಕ ಸಭಾ ಕ್ಷೇತ್ರದ ಸಿಪಿಐ (ಎಂ) ಅಭ್ಯರ್ಥಿ ಕಾ| ಕೆ. ಆರ್. ಶ್ರೀಯಾನ್

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ; ಸೆಕ್ರೆಟಾರಿಯೇಟ್ ಸದಸ್ಯರೂ, ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಕಾರ್ಯದರ್ಶಿಯವರೂ, ಎಸ್. ಕೆ. ಟೈಲ್ ವರ್ಕರ್ಸ್ ಯೂನಿಯನಿನ ಅಧ್ಯಕ್ಷರೂ, ಕಳೆದ ಮೂರು ದಶಕಗಳಿಂದಲೂ ದ. ಕ. ಜಿಲ್ಲೆಯಲ್ಲಿ ರೈತ—ಕಾರ್ಮಿಕರ, ಯುವ ಜನತೆಯ ಸಂಘಟನೆಯಲ್ಲಿ ನುರಿತ ಹಿರಿಯ ಮುಖಂಡರಾದ ಕಾ. ರಂಗಪ್ಪ ಶ್ರಿಯಾನ್ ಅವರನ್ನು ಎಂಟನೆಯ ಲೋಕ ಸಭಾ ಚುನಾವಣೆಯಲ್ಲಿ ಉಡುಪಿ ಮತ ಕ್ಷೇತ್ರದಿಂದ ಸಿ.ಪಿ.ಐ.(ಎಂ) ಪಕ್ಷದ ಉಮೇದುವಾರರನ್ನಾಗಿ ನಿಲ್ಲಿಸಿದ್ದೇವೆ.

ಇಷ್ಟು ವರ್ಷಗಳಿಂದಲೂ ದ. ಕ. ಜಿಲ್ಲೆಯ ಎರಡು ಮತ ಕ್ಷೇತ್ರಗಳಿಂದ ಕಾಂಗ್ರೆಸ್ ಉಮೇದ್ವಾರರೇ ಆರಿಸಿ ಹೋಗುತ್ತಿದ್ದರೂ ಕೂಡ ನಮ್ಮ ರಾಜ್ಯದ ಹಾಗೂ ಮಂಗಳೂರು ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಅವರು ಹೇಳಿಕೊಳ್ಳುವಂಥ ಕಾರ್ಯಗಳನ್ನು ಮಾಡಿರುವುದಿಲ್ಲೆಂಬ ಸಂಗತಿ ಎಲ್ಲರಿಗೂ ಗೊತ್ತಿದೆ.

ಕುದುರೆ ಮುಖ ಕಾರ್ಖಾನೆಗೆ ಪೂರಕವಾಗಿ ಮಂಗಳೂರಿನಲ್ಲಿ ಉಕ್ಕಿನಉಂಡೆ ತಯಾರಿಸುವ ಕಾರ್ಖಾನೆಯನ್ನೂ, ಹಾಗೆಯೇ ಪೆಟ್ರೋಕೆಮಿಕಲ್ಸ್ ಕಾರ್ಖಾನೆಯನ್ನೂ ಸ್ಥಾಪಿಸುವುದಾಗಿ ಕೇಂದ್ರ ಸರ್ಕಾರ ಹೇಳುತ್ತಾ ಬಂದಿದ್ದರೂ ಕೂಡ ಅದನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಮಂಗಳೂರಿನ ಪೆಟ್ರೋಕೆಮಿಕಲ್ಸ್ ಕಾರ್ಖಾನೆಯ ಸ್ಥಾಪನೆಗಾಗಿ ಹೂಡತಕ್ಕ ಬಂಡವಾಳವನ್ನು ಉತ್ತರ ಭಾರತದಲ್ಲಿ ಅಂಥದ್ದೇ ಕಾರ್ಖಾನೆ ತೆಗೆಯುವುದರ ಸಲುವಾಗಿ ಖರ್ಚು ಮಾಡಲಾಗಿದೆ. ಕರ್ನಾಟಕಕ್ಕೆ ಅಷ್ಟೇ ಅಲ್ಲ ಇಡೀ ಜಿಲ್ಲೆಗೆ ಕೇಂದ್ರ ಸರ್ಕಾರ ಮಾಡಿದ ಅನ್ಯಾಯ ಇದಾಗಿದೆ. ದ. ಕ. ಜಿಲ್ಲೆಯ ಸಮಸ್ಯೆಗಳನ್ನು ಹಾಗೆಯೇ ಇಡೀ ಕರ್ನಾಟಕದ ಗೋಳನ್ನು ಸಮರ್ಥನೀಯವಾಗಿ ಲೋಕ ಸಭೆಯಲ್ಲಿ ಮಂಡಿಸ ಬೇಕಾದರೆ ಉಡುಪಿ ಮತ ಕ್ಷೇತ್ರದಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉಮೇದುವಾರ ಆರಿಸಿ ಹೋಗುವುದು ಅತ್ಯಗತ್ಯ.

ಕಾ. ರಂಗಪ್ಪ ಶ್ರಿಯಾನ್ ಅವರು ಚಿಕ್ಕಂದಿನಿಂದಲೂ ಹೋರಾಟಗಾರರಾಗಿಯೇ ಬೆಳೆದು ಬಂದಿದ್ದು, ದ. ಕ. ಜಿಲ್ಲೆಯಲ್ಲಿಯೂ ಇಡೀ ಕರ್ನಾಟಕ ರಾಜ್ಯಾದ್ಯಂತವೂ ಸಂಘಟಿತ ರೈತ ಕಾರ್ಮಿಕರೂ, ವಿದ್ಯಾರ್ಥಿ, ಯುವ ಜನತೆಯೂ ವಿಜಯ ನಗರ ಉಕ್ಕಿನ ಕಾರ್ಖಾನೆ, ಪೆಟ್ರೋಕೆಮಿಕಲ್ ಕೈಗಾರಿಕೆ, ಉಕ್ಕಿನ ಉಂಡೆ ತಯಾರಿಸುವ

[8ನೇ ಪುಟ ನೋಡಿ]

ಸಿಪಿಐ [ಎಂ] ನ ಚುನಾವಣಾ ಚಿಹ್ನೆ

# ದೇಶವನ್ನು ಅಪಾಯದ ಅಂಚಿಗೆ ನೂಕಿರುವ ಕಾಂಗ್ರೆ ಪಕ್ಷವನ್ನೂ, ಕೋಮುವಾದಿಗಳನ್ನೂ ಸೋಲಿಸಿ

[ರಾಜ್ಯ ಸಿ.ಪಿ.ಐ. (ಎಂ) ನ ಪರವಾಗಿ ಕಾ|| ಎಸ್. ಸೂರ್ಯನಾರಾಯಣರಾವ್ ಅವರು ಆಕಾಶವಾಣಿಯಲ್ಲಿ ಮಾಡಿದ ಭಾಷಣದ ಪೂರ್ಣ ಪಾಠ]

ಕೆಲವು ಸಾಮ್ರಾಜ್ಯಶಾಹಿ ದೇಶಗಳು ಪ್ರಪಂಚದಲ್ಲಿ ಅಣು ಯುದ್ಧದಿಂದಲೇ ತಮ್ಮ ಶೋಷಕ ವ್ಯವಸ್ಥೆಯನ್ನು ಉಳಿಸಿಕೊಳ್ಳಬಹುದೆಂಬ ಭ್ರಮೆಯಿಂದ ಸಮಾಜವಾದ ಪದ್ಧತಿಯನ್ನು ನಾಶ ಮಾಡಲು ಸರ್ವ ಪ್ರಯತ್ನಗಳನ್ನು ಉಪಯೋಗಿಸಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ, ಭಾರತ ದೇಶದ ಅಲಿಪ್ತ ನೀತಿ, ಅಭಿವೃದ್ಧಿ ಹೊಂದುವ ರಾಷ್ಟ್ರಗಳ ಹೊಸ ಅಂತರ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆವಾಗಿ ಮಾಡುತ್ತಿರುವ ಪ್ರಯತ್ನಗಳನ್ನು ವಿಫಲಗೊಳಿಸಲು ಅನೇಕ ಸಂಚು, ಪಿತೂರಿ, ಕೊಲೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಜರುಗುತ್ತಿದೆ, 8 ನೇ ಲೋಕಸಭಾ ಚುನಾವಣೆ.

ಈ ಸಾಮ್ರಾಜ್ಯಶಾಹಿಗಳು, ಯಾವ ರಾಷ್ಟ್ರ ಅವರ ಅಧೀನಕ್ಕೆ ಪೂರ್ಣವಾಗಿ ಒಳಪಡುವುದಿಲ್ಲವೋ, ಆ ರಾಷ್ಟ್ರಗಳ ಶಕ್ತಿಯನ್ನು ಛಿದ್ರಕಾರಿ ಮತ್ತು ಪ್ರತ್ಯೇಕವಾದಿ ಶಕ್ತಿಗಳಿಗೆ ಬೆಂಬಲ ನೀಡಿ, ನಿಶ್ಯಕ್ತಗೊಳಿಸಲು ಪ್ರಯತ್ನ ಮಾಡುತ್ತಿವೆ. ಈ ಪ್ರಯತ್ನದ ಒಂದು ಭಾಗವೇ ಪ್ರಧಾನಿಯಾಗಿದ್ದ ಇಂದಿರಾರವರ ಕಗ್ಗೊಲೆ.

1980 ರಲ್ಲಿ ನಡೆದ ಏಳನೇ ಲೋಕಸಭಾ ಚುನಾವಣೆಯಲ್ಲಿ, ದೇಶದಲ್ಲಿ ಕೆಲಸ ಮಾಡುವ ಸರ್ಕಾರವನ್ನು ತರುತ್ತೇವೆಂಬ ಭರವಸೆ ನೀಡಿ ಕಾಂಗ್ರೆಸ್ ಪಕ್ಷ ಅತ್ಯಧಿಕ ಸಂಖ್ಯೆಯಲ್ಲಿ ಜಯಗಳಿಸಿತು. ಆದರೆ ಈ ಐದು ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜನತೆ ಎದುರಿಸುತ್ತಿರುವ ನಿರುದ್ಯೋಗ ಸಮಸ್ಯೆಯನ್ನಾಗಲಿ, ಭ್ರಷ್ಟಾಚಾರವನ್ನಾಗಲಿ, ಬೆಲೆ ಏರಿಕೆ ತಡೆಯುವಲ್ಲಾಗಲೀ ದೇಶದ ಸಮಗ್ರತೆಯನ್ನು ರಕ್ಷಿಸುವುದರಲ್ಲಾಗಲಿ, ಸರಿಯಾದ ಸಾಮಾಜಿಕ, ಆರ್ಥಿಕ ಧೋರಣೆಯಿಲ್ಲದೆ ವೈಫಲ್ಯಗೊಂಡಿದೆ. ಇದರ ಫಲವೇ ನಾವು ಕಾಣುವ ಪಂಜಾಬಿನ ಸಮಸ್ಯೆ, ಜಾತೀಯ, ಮತೀಯ ಗಲಭೆಗಳು. ಚುನಾಯಿತ ಸರ್ಕಾರಗಳನ್ನು ತನ್ನ ಪಕ್ಷದ್ದೇ ಆಗಿರಲಿ, ವಿರೋಧಿ ಪಕ್ಷದ್ದೇ ಆಗಿರಲಿ ಕೆಲಸ ಮಾಡಲು ಬಿಡದಿರುವುದು. ಉದಾಹರಣೆಗೆ ಸಿಕ್ಕಿಂ, ಪಾಂಡಿಚೇರಿ, ಜಮ್ಮು ಕಾಶ್ಮೀರ, ಆಂಧ್ರ ಮತ್ತು ಕರ್ನಾಟಕದಲ್ಲಿ ನಡೆಸಿದ ಕುಟಿಲ ಯತ್ನ.

ಕಾಂಗ್ರೆಸ್ ಸರ್ಕಾರದ ಯೋಜನೆಗಳು ಶ್ರೀಮಂತರನ್ನು ಶ್ರೀಮಂತರನ್ನಾಗಿ, ಬಡವರನ್ನು ಬಡವರನ್ನಾಗಿಸುವ ಅಪ್ರತ್ಯಕ್ಷತೆರಿಗೆಯನ್ನು ಹೆಚ್ಚಿಸಿ ಪ್ರತ್ಯಕ್ಷ ತೆರಿಗೆಯನ್ನು ಕಡಿಮೆ ಮಾಡಿ ದೊಡ್ಡ ಬಂಡವಾಳದಾರರಿಗೆ ದೊಡ್ಡ ದೊಡ್ಡ ಜಮೀನುದಾರರಿಗೆ ಅವರ ಸಂಪತ್ತನ್ನು ಹೆಚ್ಚಿಸಲು ಅನುವು ಮಾಡಿಕೊಟ್ಟಿದೆ.

ಅಗತ್ಯ ವಸ್ತುಗಳ ಸಗಟು ವ್ಯಾಪಾರ ಮಾಡಲು ಹಿಂದೇಟು ಹೊಡೆದು ಖೋತಾ ಬಜೆಟ್ ಮಾಡಿ ಹಣದುಬ್ಬರಕ್ಕೆ ಕಾರಣ ಮಾಡಿಕೊಟ್ಟಿದೆ. ಅಗ್ಗದ ದರದಲ್ಲಿ ಅಗತ್ಯ ವಸ್ತುಗಳನ್ನು ವಿತರಣೆ ಮಾಡಲು ತಯಾರಿಲ್ಲದ ಸರ್ಕಾರ ಸುಮಾರು ಮೂರುವರೆ ಸಾವಿರ ಕೋಟಿ ರೂಪಾಯಿಗಳನ್ನು ಸಬ್ಸಿಡಿ ರೂಪದಲ್ಲಿ ದೊಡ್ಡ ಬಂಡವಾಳದಾರರಿಗೆ ನೀಡಿದೆ. ಕಾಂಗ್ರೆಸ್ ಸರ್ಕಾರ ಅನುಸರಿಸಿದ ನೀತಿಯಿಂದಾಗಿ ಒಂದೆಡೆ, ತಯಾರಾದ ವಸ್ತುಗಳ ಬೆಲೆ ಹೆಚ್ಚಿ, ಇನ್ನೊಂದೆಡೆ ರೈತನಿಗೆ ಸರಿಯಾದ ಬೆಲೆ ಸಿಗದೆ ಜನತೆಯಲ್ಲಿ ಕೊಳ್ಳುವ ಶಕ್ತಿ ಕಡಿಮೆಯಾಗಿ 25—30 ಸಾವಿರ ಕಾರ್ಖಾನೆಗಳು ಬಂದಾಗಿವೆ. ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳ ಗುಂಪಿಗೆ ಸೇರಿದ್ದಾರೆ. ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಇದ್ದ ಏಕೈಕ ಉಧ್ಯಮ—ಹತ್ತಿ ಗಿರಣಿಗಳು—ಇಂದು ದುಸ್ಥಿತಿಯಲ್ಲಿವೆ. ಸುಮಾರು 125 ಮಿಲ್ಲುಗಳು ಬಂದಾಗಿವೆ. ಇದನ್ನು ರಾಷ್ಟ್ರೀಕರಣ ಮಾಡಿ ಉದ್ಯೋಗ ಕೊಡಲು ಕೇಂದ್ರ ಸರ್ಕಾರ ತಯಾರಿಲ್ಲ.

ಪ್ರಧಾನಿ ಇಂದಿರಾರವರ ಹತ್ಯೆಯ ಹಿಂದೆ ಇರುವ ದುಷ್ಟ ಶಕ್ತಿಯನ್ನು ಸದೆಬಡಿಯುವ ಬದಲು ಕೆಲವು ಕಾಂಗ್ರೆಸ್ ಮುಖಂಡರೇ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟು ಕೊಂಡು ದೆಹಲಿ ಮತ್ತು ಅನೇಕ ಉತ್ತರ ಭಾರತದ ನಗರಗಳಲ್ಲಿ ಸಂಘಟಿತ ಧಾಳಿ ನಡೆಸಿದ್ದಾರೆ.

ಕೊಲೆ, ಲೂಟಿ, ಮಾನಭಂಗಗಳು ಅಮಾನುಷವಾಗಿ ನಡೆದಿವೆ. ದೇಶದಲ್ಲಿ ಛಿದ್ರಕಾರಿ, ಪ್ರತ್ಯೇಕಕಾರಿ ಶಕ್ತಿಗಳು ಬೆಳೆಯುವುದಕ್ಕೆ ಕಾಂಗ್ರೆಸ್ ಪಕ್ಷದ ಸಂದರ್ಭಸಾಧಕ ನೀತಿಯೇ ಕಾರಣ. ಉದಾಹರಣೆಗೆ ಕೇರಳದಲ್ಲಿ ಅದು ಅಧಿಕಾರಕ್ಕೆ ಅಂಟಿಕೊಳ್ಳಲು ಜಾತೀಯ ಮತೀಯ ಪಕ್ಷಗಳೊಡನೆ ಹೊಂದಾಣಿಕೆ ಮಾಡಿಕೊಂಡಿದೆ. ಜಾತ್ಯಾತೀತ ರಾಷ್ಟ್ರದ ಲಕ್ಷಣವನ್ನೇ ಕಾಂಗ್ರೆಸ್ ಸರ್ಕಾರ, ದೆಹಲಿಯಲ್ಲಿ ನಡೆದ ಘಟನೆಯಲ್ಲಿ ನಾಶ ಮಾಡಿದೆ. ಪಂಜಾಬಿನ ಸಮಸ್ಯೆಯನ್ನು ಬಗೆಹರಿಸದೆ, ವಿರೋಧ ಪಕ್ಷಗಳು ಜೂನ್ 1984 ರಲ್ಲಿ ಕೊಟ್ಟ ಸಲಹೆಯನ್ನು ಒಪ್ಪಿಕೊಳ್ಳದೆ, ಉಗ್ರಗಾಮಿ ಸಿಖ್ಖರು ಭಯೋತ್ಪಾದಕ ಚಟುವಟಿಕೆಯನ್ನು ನಡೆಸಿಕೊಂಡು ಹೋಗಲು ಭೂಮಿಕೆಯನ್ನು ಮಾಡಿಕೊಟ್ಟಿದೆ.

ನಿಧನ ಹೊಂದಿದ ಇಂದಿರಾ ಗಾಂಧಿಯವರು ಅಲಿಪ್ತ ನೀತಿಯ ಬಲಿಷ್ಠ ಪ್ರತಿಪಾದಕರಾಗಿದ್ದರೂ ಇಂಡಿಯಾ ದೇಶದ ಸ್ವಾತಂತ್ರ್ಯ,ಶಾಂತಿ ಚಳುವಳಿ, ವಿಮೋಚನಾ ಚಳುವಳಿಗಳಿಗೆ ಸಹಾಯಕರಾಗಿದ್ದರೂ, ಸಮಾಜವಾದಿ ರಾಷ್ಟ್ರಗಳ ಜೊತೆ ಸ್ನೇಹ ಸಂಬಂಧವನ್ನು ಅಭಿವೃದ್ಧಿ ಪಡಿಸಲು ಸಹಾಯಕರಾಗಿದ್ದರೂ ಅಣುಯುದ್ಧದ ಅಪಾಯದ ಬಗ್ಗೆ ವಿಶ್ವ ಶಾಂತಿಯ ಅಗತ್ಯತೆ ಬಗ್ಗೆ, ಅಲಿಪ್ತ ನೀತಿಯನ್ನು ಬಲಪಡಿಸುವ ಬಗ್ಗೆ, ಜನರಲ್ಲಿ ಜಾಗೃತಿಯನ್ನುಂಟು ಮಾಡಿ, ಅವರನ್ನೂ ಅದರಲ್ಲಿ ಭಾಗವಹಿಸುವಂತೆ ಮಾಡಿಲ್ಲ.

ಕಾಂಗ್ರೆಸ್ ಪಕ್ಷ ಹೆಚ್ಚಿನ ಅಧಿಕಾರವನ್ನು ಪಡೆಯಬೇಕೆಂಬ ಉದ್ದೇಶದಿಂದ ರಾಜ್ಯಗಳ ಅಭಿವೃದ್ಧಿಗೆ ಹೆಚ್ಚಿನ ಸಂಪನ್ಮೂಲಗಳನ್ನು ಕೊಡಲು ಹಿಂದೇಟು ಹೊಡೆದಿದೆ. ಕಾಂಗ್ರೆಸ್ ಪಕ್ಷ ಅನುಸರಿಸಿದ ದಿವಾಳಿಕೋರ ನೀತಿಯಿಂದಾಗಿ ಎಲ್ಲ ವಿಭಾಗದ ಜನರೂ, ರೈತರೂ, ಕಾರ್ಮಿಕರೂ, ಮಧ್ಯಮ ವರ್ಗದ ಜನರೂ, ಸಣ್ಣ ಸಣ್ಣ ವ್ಯಾಪಾರಸ್ಥರೂ, ಹೋರಾಟದ ಕಣಕ್ಕೆ ಇಳಿಯಬೇಕಾಯಿತು. ಈ ಹೋರಾಟಗಳನ್ನು ಅಮಾನುಷವಾದ ರೀತಿಯಲ್ಲಿ ಹತ್ತಿಕ್ಕಲು ಪಾರ್ಲಿಮೆಂಟಿನ ಬಹುಮತವನ್ನು ಉಪಯೋಗಿಸಿಕೊಂಡು ಅನೇಕ ಕರಾಳ ಕಾನೂನುಗಳನ್ನು ಜಾರಿ ಮಾಡಿಸಿಕೊಂಡಿದೆ. ಉದಾಹರಣೆಗೆ ಎನ್.ಎಸ್.ಎ., ಇ.ಎಸ್.ಎಂ.ಎ. ಡಿಸ್ಟರ್ಬೇಡ್ ಏರಿಯಾಸ್ ಆ್ಯಕ್ಟ್ ಮೊದಲಾದವು. ಜನಗಳ ಸಮಸ್ಯೆಗಳನ್ನು ಬಗೆಹರಿಸದೆ ಕಾಂಗ್ರೆಸ್ ಪಕ್ಷ ಅವರಿಂದ ದೂರವಾಗಿದೆ. ಆದ್ದರಿಂದ ಹೇಗಾದರೂ ಮಾಡಿ ಅಧಿಕಾರಕ್ಕೆ ಅಂಟಿ ಕೊಳ್ಳಲು ಅಧ್ಯಕ್ಷೀಯ ಮಾದರಿ ಸರಕಾರ ಬೇಕೆಂಬ ಚರ್ಚೆಯನ್ನು ಆರಂಭಿಸಿತು. ಇಂದಿರಾ ಗಾಂಧಿ ನಿಧನದಿಂದ ಅದನ್ನು ಕೈ ಬಿಟ್ಟಿದೆ.

ಸರ್ಕಾರಿ ನೌಕರರು ಮತ್ತಿತರ ದುಡಿಯುವ ಜನತೆಯ ಹೋರಾಟ ನಡೆದಾಗ ಕೇರಳದ ಎಡರಂಗ ಸರಕಾರವಾಗಲಿ ಈಗ ಪಶ್ಚಿಮ ಬಂಗಾಲ, ತ್ರಿಪುರಾಗಳಲ್ಲಾಗಲಿ ದಮನಕಾರಿ ಅಸ್ತ್ರಗಳನ್ನು ಉಪಯೋಗಿಸಲಿಲ್ಲ. ಬದಲಾಗಿ ಅದಕ್ಕೆ ಬೆಂಬಲ ನೀಡಿದೆ. ಆದರೆ ಕಾಂಗ್ರೆಸ್ ಸರ್ಕಾರ ದಮನಕಾರಿ ಕ್ರಮಗಳನ್ನು ಹೋರಾಟಗಳನ್ನು ಹತ್ತಿಕ್ಕಲು ಉಪಯೋಗಿಸಿತು.

ತನ್ನ ಪ್ರಧಾನಿಯ ರಕ್ಷಣೆಯನ್ನೇ ಮಾಡದ ಸರ್ಕಾರ ದೇಶದ ರಕ್ಷಣೆ ಮಾಡಲು ಸಾಧ್ಯವಿಲ್ಲ ಎಂಬ ಶಂಕೆ ಜನತೆಯಲ್ಲಿ ಮೂಡಿದೆ. ಆದುದರಿಂದ ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಬೇಕು ಮತ್ತು ಎಡ ಮತ್ತು ಪ್ರಜಾ ಪ್ರಭುತ್ವವಾದಿ ಶಕ್ತಿಗಳು ಪಾರ್ಲಿಮೆಂಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುವಂತೆ ಮಾಡಬೇಕೆಂದು ಮನವಿ ಮಾಡುತ್ತೇವೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಪಾರ್ಲಿಮೆಂಟಿನಲ್ಲಿ ಈ ಕೆಳಗಿನ ಹದಿಮೂರು ಅಂಶಗಳಿಗಾಗಿ ಹೋರಾಡುತ್ತದೆಂದು ಜನತೆಗೆ ಆಶ್ವಾಸನೆ ನೀಡುತ್ತದೆ.

ಈಗ ಈ ಗುರಿಯ ಕಡೆಗೆ ಸಾಗಲು ಮತ್ತು ತಕ್ಷಣದ ಸಮಸ್ಯೆಗಳನ್ನು ಎದುರಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಈ ಕೆಳಗಿನ ಕಾರ್ಯಕ್ರಮಗಳನ್ನು ಮುಂದಿಡುತ್ತದೆ.

1. ಭೂ ಸುಧಾರಣೆಗಳನ್ನು ಕಸುವಿನಿಂದ ಜಾರಿಗೆ ತರುವುದು, ಉಳುವವನಿಗೆ ಭೂಮಿಯ ಹಂಚಿಕೆ, ಭೂ ಕೇಂದ್ರಿಕರಣವನ್ನು ತಪ್ಪಿಸುವುದು, ಕೃಷಿ ಕಾರ್ಮಿಕರ ಮತ್ತು ಬಡರೈತರ ಸಾಲವನ್ನು ವಜಾ ಮಾಡುವುದು, ರೈತರ ಬೆಳೆಗೆ ಲಾಭದಾಯಕ ಬೆಲೆ, ರೈತರಿಗೆ ಅಗ್ಗದ ಸಾಲ ಮತ್ತು ಬೀಜ ಮತ್ತು ಗೊಬ್ಬರ ಇತ್ಯಾದಿಗಳನ್ನು ಕೊಳ್ಳಲು ಸಹಾಯ ಧನ.

2. ವಿದೇಶಿ ಪ್ರಭಾವದಿಂದ ಸಂಪೂರ್ಣ ಮುಕ್ತವಾದ, ರಾಷ್ಟ್ರದ ಆರ್ಥಿಕತೆಯ ಸ್ವತಂತ್ರ ಬೆಳವಣಿಗೆಯನ್ನು, ಸಾಧಿಸಲನುವಾಗುವಂತೆ ಯೋಜನಾ ನೀತಿ ಮತ್ತು ಆದ್ಯತೆಗಳ ಮಾರ್ಪಾಡು. ವಿಶ್ವಬ್ಯಾಂಕ್, ವಿಶ್ವ ಹಣಕಾಸು ನಿಧಿ, ಬಹುರಾಷ್ಟ್ರೀಯ ಸಂಸ್ಥೆಗಳ ಮೇಲಿನ ಅವಲಂಬನೆಯನ್ನು ಕೊನೆಗಾಣಿಸುವುದು, ಸಮಾನ ಸ್ಥಾನಮಾನ ಮತ್ತು ಅಧಿಕಾರದೊಡನೆ ಕಾರ್ಮಿಕರನ್ನು ಸಾರ್ವಜನಿಕ ವಲಯದ ಉತ್ತಮ ನಿರ್ವಹಣೆಯಲ್ಲಿ ಪಾಲ್ಗೊಳಿಸಿ ಆಂತರಿಕ ಸಂಪನ್ಮೂಲಗಳನ್ನು ಹೆಚ್ಚಿಸುವದು, ದೊಡ್ಡ ಭೂಮಾಲೀಕರ, ಗುತ್ತೇದಾರಿ ಬಂಡವಾಳದಾರರ ಅಪಾರ ಆಸ್ತಿಯನ್ನು ವಶಪಡಿಸಿಕೊಳ್ಳುವುದು. ವಿದೇಶಿ ಗುತ್ತೇದಾರಿ ಸಂಸ್ಥೆಗಳ ರಾಷ್ಟ್ರೀಕರಣ ಹಿಂದಿನ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ವಿವಿಧ ರಾಜ್ಯ ಸಲಹೆಯ ಮೇರೆಗೆ 7ನೇ ಯೋಜನೆಯ ಪುನರ್ರಚನೆ.

3. ತೀವ್ರ ಬಿಕ್ಕಟ್ಟಿಗೊಳಗಾದ ಹತ್ತಿ ಗಿರಣಿ, ಮತ್ತು ಸೆಣಬು ಕೈಗಾರಿಕೆಗಳನ್ನು ರಾಷ್ಟ್ರೀಕರಿಸಿ, ಸಮಾನ ಸ್ಥಾನಮಾನದ ಆಧಾರದ ಮೇಲೆ ಕಾರ್ಮಿಕರು ಆಡಳಿತದಲ್ಲಿ ಪಾಲ್ಗೊಳಿಸಿ ನಿರ್ವಹಿಸುವುದು.

4. ಕೈಗಾರಿಕಾ ಮತ್ತು ಕೃಷಿ ಕೂಲಿಕಾರರಿಗೆ, ಮಧ್ಯಮ ವರ್ಗದ ನೌಕರರಿಗೆ ಕನಿಷ್ಠ ನ್ಯಾಯಾಬದ್ಧ ಕೂಲಿ, ಹಾಗೂ ಜೀವನ ವೆಚ್ಚ ಏರಿಕೆಯನ್ನು ಸರಿದೂರಿಸುವಷ್ಟು ತುಟ್ಟಿ ಭತ್ಯೆ ಬೋನಸ್ಸನ್ನು ಮುಂದೂಡಿದ ಸಂಬಳವಾಗಿ ಪರಿಗಣಿಸುವುದು. ರಾಜ್ಯ ಮತ್ತು ಕೇಂದ್ರ ಸರಕಾರಿ ನೌಕರರಿಗೆ, ಪೂರ್ಣ ಕಾರ್ಮಿಕ ಸಂಘಟನಾ ಹಕ್ಕುಗಳು. ಪೋಲೀಸು ತಪಾಸಣೆಯ ನಿಷೇದ. ಗ್ರಾಮೀಣ ಮತ್ತು ನಗರಗಳ ನಿರುದ್ಯೋಗಿಗಳಿಗೆ ಉದ್ಯೋಗ ಅಥವಾ ನಿರುದ್ಯೋಗ ಭತ್ಯೆ, ಸಂವಿಧಾನದಲ್ಲಿ ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಗಣಿಸುವುದು. ಜನತೆಗೆ ಅಗ್ಗದ ದರಗಳಲ್ಲಿ ಆಹಾರ ವಸ್ತುಗಳನ್ನು ವಿತರಣೆ ಮಾಡಲು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಜಾಲ.

5. ರಾಷ್ಟ್ರೀಯ ಭದ್ರತಾ ಕಾಯಿದೆ ಅವಶ್ಯಕ ಸೇವೆಗಳ ನಿರ್ವಹಣಾ ಕಾಯಿದೆ,ಮೊದಲಾದ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳ ಹಿಂದೆಗೆತ.

6. ಪ್ರೌಢಶಾಲೆಯವರೆಗೆ ಮುಫತ್ತಾಗಿ ಶಿಕ್ಷಣ, ಹಾಸ್ಟೆಲ್ ಸೌಲಭ್ಯಗಳು, ಹರಿಜನ–ಗಿರಿಜನರ ಅವಶ್ಯಕತೆಗಳಿಗೆ ವಿಶೇಷ ಗಮನ. ಎಲ್ಲಾ ಭಾಷೆಗಳಿಗೆ ಭಾಷಾ ಜನಾಂಗಗಳಿಗೆ ಸಮಾನ ಹಕ್ಕು. ಮಾತೃ ಭಾಷೆಯಲ್ಲಿಯೇ ಶಿಕ್ಷಣ. ಎಲ್ಲಾ ಮಾನವ ಜನಾಂಗಗಳ, ಅಲ್ಪ ಸಂಖ್ಯಾತರ ದೇಶಿಯ ಜನಾಂಗಗಳ ಸಾಂಸ್ಕೃತಿಕ ಅಭಿವೃದ್ದಿಗೆ ಗಮನ. ಶಿಕ್ಷಣವನ್ನು ಮತೀಯಗೊಳಿಸುವದಕ್ಕೆ ನಿಲುಗಡೆ. ಶಿಕ್ಷಣವನ್ನು ಸಾಮಾನ್ಯ ಪಟ್ಟಿಯಿಂದ ತೆಗೆದು ರಾಜ್ಯ ಪಟ್ಟಿಗೆ ಬದಲಾಯಿಸುವದು. ವಿದ್ಯಾರ್ಥಿಗಳ, ಯುವಕರ ಒತ್ತಾಯಗಳಿಗೆ ತೀವ್ರ ಗಮನ.

7. ಮಹಿಳೆಯ ಸಾಮಾಜಿಕ–ಅಸಮಾನತೆಯ ನಿರ್ಮೂಲ, ಆಸ್ತಿ ಹಕ್ಕಿನಲ್ಲಿ ವೈವಾಹಿಕ ಹಕ್ಕಿನಲ್ಲಿ ವಿವಾಹ ವಿಚ್ಛೇದನ ಕಾಯಿದೆಯಲ್ಲಿ ಉದ್ಯೋಗ, ವೃತ್ತಿಗಳಿಗೆ ಸೇರಿಸಿಕೊಳ್ಳುವುದರಲ್ಲಿ ಪುರುಷ ಸಮಾನ ಹಕ್ಕುಗಳು.

[6ನೇ ಪುಟ ನೋಡಿ]

# ‘ದೇಶವನ್ನಾಳಲು ಕಾಂಗ್ರೈ ಅಯೋಗ್ಯವಾಗಿದೆ’

**– ಜ್ಯೋತಿ ಬಸು**

“ನಮ್ಮನ್ನು ಕಾಂಗ್ರೆಸ್ ಭಯಾನಕ ಪರಿಸ್ಥಿತಿಯಲ್ಲಿ ತಂದಿರಿಸಿದೆ. ಮತ್ತೊಮ್ಮೆ ಐದು ವರ್ಷ ಅದು ಚುನಾಯಿಸಲ್ಪಟ್ಟರೆ ದಿಲ್ಲಿಯಲ್ಲಿ ಗಂಡಾಂತರ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಇಂದಿರಾ ಕಾಂಗ್ರೆಸ್ಸನ್ನು ಈ ಚುನಾವಣೆಯಲ್ಲಿ ಸೋಲಿಸಲೇ ಬೇಕು” ಎಂದು ಸಿಪಿಐ [ಎಂ] ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರೂ, ಪಶ್ಚಿಮ ಬಂಗಾಲ ಎಡರಂಗ ಸರಕಾರದ ಮುಖ್ಯಮಂತ್ರಿಯವರೂ ಆದ ಜ್ಯೋತಿಬಸು ಅವರು ಕಲ್ಕತ್ತಾದಲ್ಲಿ ನಡೆದ ಸಾರ್ವಜನಿಕ ಭಾಷಣದಲ್ಲಿ ಕರೆಕೊಟ್ಟರು.

ನಾವು ಅಧಿಕಾರದಿಂದಲೇ ತೆಗೆದು ಹಾಕಬೇಕೆಂದು ಹೇಳುತ್ತಿರುವ ಒಬ್ಬ ವ್ಯಕ್ತಿಯ ಕೊಲೆ ಈ ರೀತಿಯಲ್ಲಾದರೆ ಅದು ಆ ಪಕ್ಷದ ಆಂತರಿಕ ಪ್ರಶ್ನೆಯಾಗಿ ಉಳಿಯುವುದಿಲ್ಲ. ಇಡೀ ದೇಶದ ಪ್ರಶ್ನೆಯಾಗುತ್ತದೆ. ಸಾಮ್ರಾಜ್ಯಶಾಹಿಗಳ ಒಳಸಂಚಿನ ಕುರಿತು, ಯುದ್ಧ ಮತ್ತು ಶಾಂತಿಯ ಕುರಿತು ಎಚ್ಚರಿಸುತ್ತಲೇ ಬಂದಿದ್ದೇವೆ. ತಟಸ್ಥ ದೇಶಗಳ ಚಳುವಳಿಯನ್ನು ಬರೇ ಕಾಗದದಲ್ಲೇ ಉಳಿಸದೆ ಅದನ್ನೊಂದು ಜೀವಂತ ಚಳುವಳಿಯನ್ನಾಗಿ ನಡೆಸಿಕೊಂಡು ಹೋಗಬೇಕೆಂದು ಇಂದಿರಾ ಗಾಂಧಿಗೆ ಹೇಳುತ್ತ ಬಂದಿದ್ದೆವು.

ಈ ತಟಸ್ಥ ಧೋರಣೆಯ ಚಳುವಳಿಯಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಯನ್ನು ಗುರುತಿಸಿ, ನಮ್ಮ ದೇಶವಷ್ಟೇ ಅಲ್ಲ ಇಡೀ ಜಗತ್ತಿನಲ್ಲಿ ಯುದ್ಧದ ಭೀತಿ ಆವರಿಸಿದೆ ಆದ್ದರಿಂದ ಯುದ್ಧ ಖೋರರನ್ನು ಬಹಿರಂಗವಾಗಿಯೇ ವಿರೋಧಿಸ ಬೇಕೆಂದು ಹೇಳಿದೆವು. ಆದರೆ ಅಂಥ ಕ್ರಮ ಕೈಗೊಳ್ಳಲಿಲ್ಲ; ಅಷ್ಟೇ ಅಲ್ಲ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಏಜಂಟರು ಭಾರತದೊಳಗೆ ಯಾವ ರೀತಿ ನುಸುಳಿ ಬರುತ್ತಿದ್ದಾರೆಂಬುದನ್ನು ಕಳು ಹಿಡಿಯಲು ಕೂಡ ಇಂದಿರಾ ಸರಕಾರ ವಿಫಲಗೊಂಡಿದೆ. ಯುದ್ಧ ವಿರೋಧಿ ಚಳುವಳಿಯಲ್ಲಿ ತನ್ನ ಪಕ್ಷ ಭಾಗವಹಿಸುವಂತೆ ಮಾಡಲಿಲ್ಲ. ಆದ್ದರಿಂದ ಸಾಮ್ರಾಜ್ಯಶಾಹಿ ವಿರೋಧಿ ಭಾವನೆ ಇರುವವರು ಕಾಂಗ್ರೆಸ್ಸಿನಲ್ಲಿ ಬಹಳ ಕಡಿಮೆ ಜನರಿದ್ದಾರೆ.

ದೇಶದಲ್ಲಿ ಆಂತರಿಕ ಹಾಗೂ ಬಾಹ್ಯ ಗಂಡಾಂತರವಿದೆಂಬ ಸಂಗತಿ ಎಲ್ಲರಿಗೂ ಗೊತ್ತು. ಆದರೆ ಅಂಥ ಪ್ರಶ್ನೆಗಳ ಕುರಿತು ಚರ್ಚಿಸಲು ಕಾಂಗ್ರೆಸ್ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ದೇಶದಲ್ಲಿರುವ ಅತಿ ದೊಡ್ಡ ಪಕ್ಷವಾದ ಕಾಂಗ್ರೆಸ್ಸು ಈ ಗಂಡಾಂತರದ ಕುರಿತು ಚರ್ಚಿಸಲು ತಯಾರಿಲ್ಲದೆ ತಟಸ್ಥ ರಾಷ್ಟ್ರಗಳ ಚಳುವಳಿಯ ಮುಖಂಡತ್ವವಹಿಸಿ, ಎರಡೂ ಕಡೆ ಒಳ್ಳೆ ಸಂಬಂಧ ಇಟ್ಟುಕೊಳ್ಳುವುದೇ ತಟಸ್ಥ ರಾಷ್ಟ್ರಗಳ ಧೋರಣೆಯ ಗುರಿ ಮಾತ್ರ ಎಂದು ತಿಳಿದುಕೊಂಡಿರುವುದು ಸರಿಯಲ್ಲ.

ರಾಷ್ಟ್ರದ ಐಕ್ಯತೆಗಾಗಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ನಮ್ಮ ಪಕ್ಷ ಸಹಕಾರ ನೀಡುವುದಾಗಿ ಇಂದಿರಾ ಗಾಂಧಿಗೆ ಹೇಳಿದ್ದರೂ ಕೂಡ, ಅದರ ಕಡೆ ಆಕೆ ಗಮನ ಹರಿಸಲೇ ಇಲ್ಲ. ವಿದೇಶೀ ಗುಪ್ತಚಾರರು ಅಸ್ಸಾಂ-ಪಂಜಾಬ್‌ಗಳಲ್ಲಿಯ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದು, ನಮ್ಮ ಕೇಂದ್ರದ ಗುಪ್ತಚಾರದಳ ಅವುಗಳ ಕುರಿತು ಏನು ಮಾಡುತ್ತಿದೆಂದು ಕೇಳಿದ್ದೆ. ಎರಡೂ ಗುಪ್ತ ದಳದವರು ಕೂಡಿ ಪ್ರಧಾನ ಮಂತ್ರಿಯ ಹತ್ಯೆ ಮಾಡಿರುವುದನ್ನು ಈಗ ನೋಡುತ್ತಿದ್ದೇವೆ.

ಕಾಂಗ್ರೈ ಪಕ್ಷ ಯಾವ ಆಶ್ವಾಸನೆಗಳನ್ನು ಮತದಾರರ ಮುಂದೆ ನೀಡುತ್ತಿದೆ, ಅವುಗಳನ್ನು ಪೂರೈಸಲು ಅವರಿಂದ ಸಾಧ್ಯವಿದೆಯೇ ಎಂಬ ಪ್ರಶ್ನೆ ಈ ಲೋಕಸಭೆ ಚುನಾವಣೆಯ ಮುಂದಿದೆ. ಇಂದಿರಾ ಗಾಂಧಿಯ ಮರಣದಿಂದ ಕಾಂಗ್ರೆಸ್ಸಿನವರಿಗೆ ಒಂದು ದೃಷ್ಟಿಯಲ್ಲಿ ಸಂತೋಷವಾಗಿರುವಂತೆ ಕಾಣುತ್ತದೆ. ಯಾಕಂದರೆ ತಮ್ಮ ಪಕ್ಷದ, ಸರಕಾರದ 5 ವರ್ಷಗಳ ಸಾಧನೆಯನ್ನು ಹೇಳದೆ, ಆಕೆಯ ಫೋಟೋ ತೋರಿಸಿ ಮತ ಪಡೆದು ಗೆಲ್ಲಬಹುದೆಂದು ತಿಳಿದಂತೆ ಕಂಡು ಬರುತ್ತಿದೆ.

ತಾವು ಅಧಿಕಾರಕ್ಕೆ ಬಂದರೆ ದೇಶದ ಐಕ್ಯತೆಯನ್ನು ಕಾಪಾಡುವುದಾಗಿ ಹೇಳಿದ್ದರು. ಆದರೆ ಕಳೆದ 5 ವರ್ಷಗಳಲ್ಲಿ ಪಂಜಾಬಿನ ಪರಿಸ್ಥಿತಿ ಏನಾಗಿದೆ ? ಹಿಂದುಗಳ ಕೊಲೆ ನಡೆದಿದೆ. ಸ್ವರ್ಣಮಂದಿರ ಶಸ್ತ್ರಾಸ್ತ್ರಗಳ ಆಗರವಾಗಿದೆ. ಸೈನ್ಯದ ಕೈವಾಡ ನಡೆದಿದೆ. ಎರಡು ವರ್ಷಗಳ ಹಿಂದೆ ಸಿಪಿಐ [ಎಂ] ಮತ್ತು ಇತರ ವಿರೋಧ ಪಕ್ಷಗಳ ಸಲಹೆಯಂತೆ ಅಕಾಲಿಗಳ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಿದ್ದರೆ ಖಲಿಸ್ತಾನದ ಘೋಷಣೆ ಕೇಳಿಬರುತ್ತಿರಲಿಲ್ಲ. ಹಿಂದೂ-ಸಿಖ್ ದ್ವೇಷ ಬೆಳೆಯುತ್ತಿರಲಿಲ್ಲ. ಸಿಖ್ಖರೆಲ್ಲ ನಮ್ಮ ಅಣ್ಣತಮ್ಮಂದಿರು, ಭಾರತದ ನಾಗರಿಕರು ಎಂದು ನಾವು ತಿಳಿದಿದ್ದೇವೆ.

ಅಸ್ಸಾಂನಲ್ಲಿಯೂ ಇದೇ ಗತಿಯಾಗಿದೆ. ಬೇರೆ ಬೇರೆ ಭಾಷೆಗಳನ್ನಾಡುವ ಜನರು ಅಸ್ಸಾಂನಲ್ಲಿ ಒಟ್ಟಿಗೆ ಜೀವಿಸಲು ಸಾಧ್ಯವಿಲ್ಲವೆಂದಾದರೆ ದೇಶದ ಗತಿಯೇನು ? ಅದು ತುಂಡು ತುಂಡಾಗಬೇಕಾಗುತ್ತದೆ. ಇದರ ಮೂಲಕ್ಕೆ ನಾವು ಹೋದರೆ ಒಂದರಲ್ಲೊಂದು ಹಂತದಲ್ಲಿ ಕಾಂಗ್ರೆಸ್ ಇಂಥ ಅಪಾಯಕಾರಿ ಶಕ್ತಿಗಳೊಂದಿಗೆ ಸಂಬಂಧ ಇಟ್ಟುಕೊಂಡಿರುವುದು ಕಂಡು ಬರುತ್ತದೆ. ತ್ರಿಪುರಾದಲ್ಲಿಯೇ ನೋಡೋಣ ಎಡರಂಗ ಸರಕಾರ ಅಲ್ಲಿ ಗುಡ್ಡಗಾಡು ಮತ್ತು ಬಂಗಾಲಿ ಜನರನ್ನೆಲ್ಲ ಐಕ್ಯತೆಯಿಂದಿರುವಂತೆ ಮಾಡಿದರೆ, ಸ್ಥಳೀಯ ಹಾಗೂ ದಿಲ್ಲಿಯ ಕಾಂಗ್ರೆಸ್ ಮುಖಂಡರು ಅದನ್ನು ಮೆಚ್ಚಲಿಲ್ಲ. ಅಷ್ಟೇ ಅಲ್ಲ ಬಂಗ್ಲಾದೇಶದಲ್ಲಿ ತರಬೇತಿ ಪಡೆಯುತ್ತಿರುವ ಗುಡ್ಡಗಾಡು ಪ್ರದೇಶದ ತೀವ್ರವಾದಿಗಳ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡಿದೆ ಕಾಂಗ್ರೆಸ್ ಪಕ್ಷ.

ಮಿಝೋರಾಂನಲ್ಲಿ ಕೂಡ ಕಾಂಗ್ರೆಸ್ಸು ಇದೇ ನೀತಿಯನ್ನನುಸರಿಸಿದೆ. ಹಿಂಸಾಚಾರಿಗಳನ್ನು ಮೂಲೆಗುಂಪು ಮಾಡಿ ಮಿಝೋ ಜನರಲ್ಲಿ ಐಕ್ಯತೆ ಉಂಟುಮಾಡಿರುವ ಬ್ರಿಗೇಡಿಯರ್ ಸೈಲೋ ಅವರನ್ನು ಮುಖ್ಯಮಂತ್ರಿ ಪದವಿಯಿಂದ ತೆಗೆದುಹಾಕಿ, ಸಶಸ್ತ್ರ ಬಂಡುಖೋರರ ಮುಖಂಡ ಲಾಲ್‌ಡೆಂಗಾ ಅವರ ಸಹಾಯದಿಂದ ಚುನಾವಣೆಯಲ್ಲಿ ಸ್ಪರ್ಧಿಸಿ, ಗೆದ್ದಿದೆ. ಲಾಲ್‌ಡೆಂಗಾ ಜೊತೆ ಮಾತುಕತೆ ನಡೆದಿದೆ. ಸಶಸ್ತ್ರ ಬಂಡುಖೋರರೆಲ್ಲ ಬಹಿರಂಗವಾಗಿದ್ದಾರೆ. ಬ್ರಿಗೇಡಿಯರ್ ಸೈಲೋ ಕಮ್ಯುನಿಸ್ಟನೂ ಅಲ್ಲ, ಎಡಪಂಥೀಯನೂ ಅಲ್ಲ ತೀವ್ರವಾದಿಗಳನ್ನು ವಿರೋಧಿಸಿ ಮಿಝೋ ಜನರ ಐಕ್ಯತೆಗಾಗಿ ದುಡಿಯುವ ವ್ಯಕ್ತಿ. ಅಂಥವ ಕಾಂಗ್ರೆಸ್ಸಿಗೆ ಬೇಕಾಗಿಲ್ಲ. ಪಶ್ಚಿಮ ಬಂಗಾಲದಲ್ಲಿ ಕೂಡ ಡಾರ್ಜಿಲಿಂಗ್ ಮತ್ತು ಅದರ ಸುತ್ತ ಮುತ್ತಲ ಪ್ರದೇಶವನ್ನು ಪ್ರತ್ಯೇಕಿಸಬೇಕೆಂಬ ಚಳುವಳಿಗೆ ಇಂದಿರಾ ಕಾಂಗ್ರೆಸ್ ಬೆಂಬಲ ನೀಡಿದೆ. ಹೀಗೆಲ್ಲ ಇರುವಾಗ ಕಾಂಗ್ರೈ ಪಕ್ಷ ದೇಶದ ಐಕ್ಯತೆಯನ್ನು ಉಳಿಸಿಕೊಳ್ಳುವುದು ಹೇಗೆ ?

ಪ್ರಜಾ ಪ್ರಭುತ್ವವನ್ನು ರಕ್ಷಿಸುತ್ತೇವೆಂದು ಇಂದಿರಾ ಕಾಂಗ್ರೆಸ್ ಹೇಳಿತ್ತು. ಆದರೆ ತಾವಿತ್ತ ವಚನವನ್ನು ಅವರು ಪೂರೈಸಿಲ್ಲ. ಯಾವ ವಿಚಾರಣೆಯಿಲ್ಲದೆ ಜನರನ್ನು ಬಂಧನದಲ್ಲಿಡುವ, ಕಾರ್ಮಿಕರ ಸಂಘಟನೆಯನ್ನು ನಾಶ ಮಾಡುವ ಹಲವಾರು ಕಾನೂನುಗಳನ್ನು ಕಳೆದೈದು ವರ್ಷಗಳಲ್ಲಿ ಪಾಸು ಮಾಡಿದೆ. ಈ ಕಾನೂನುಗಳು ಅನಾಗರಿಕ ಮತ್ತು ಕ್ರೂರವಾಗಿರುವುದರಿಂದ ಅವುಗಳನ್ನು ಅನುಷ್ಠಾನದಲ್ಲಿ ತರುವುದಿಲ್ಲೆಂದು ಪಶ್ಚಿಮ ಬಂಗಾಲ—ತ್ರಿಪುರ ಸರ್ಕಾರಗಳು ತಿಳಿಸಿವೆ.

ಸರ್ವಾಧಿಕಾರಿ ಕ್ರಮದತ್ತ ಕಾಂಗ್ರೈ ಮುಂದುವರಿಯಿತು. ಕರ್ನಾಟಕದ ಜನತಾ ಸರ್ಕಾರವನ್ನು ಉರುಳಿಸಲು ಪ್ರಯತ್ನ ಮಾಡಿತು. ಆದರೆ ಅದು ವಿಫಲವಾಯಿತು. ಕಾಶ್ಮೀರದ ಡಾ। ಫರೂಕ್ ಅಬ್ದುಲ್ಲಾ ಸರ್ಕಾರವನ್ನು ಉರುಳಿಸಿತು. ಆಂಧ್ರದಲ್ಲಿ ರಾಮರಾವ್ ಅವರು ಚಿಕಿತ್ಸೆಗಾಗಿ ಅಮೇರಿಕಕ್ಕೆ ಹೋದಾಗ ಈ ಹೀನಾಯ ಕೆಲಸ ಮಾಡಲಾಯಿತು.

ಇದೆಲ್ಲ ಮಾಡಿದ್ದು ಕಾಂಗ್ರೈ ಪಕ್ಷ. ಲೋಕಶಾಹಿಯ ಮೌಲ್ಯ ಉಳಿಯಿತೆಲ್ಲಿ ? ಚುನಾವಣೆಯಿಂದ ಏನಾದರೂ ಅರ್ಥವಿತೆಯೇ ? ರಾಜ್ಯ ಸರ್ಕಾರಗಳನ್ನುರುಳಿಸಲು ರಾಜ್ಯಪಾಲರನ್ನುಪಯೋಗಿಸಲಾಗುತ್ತಿದೆ. ಪಶ್ಚಿಮ ಬಂಗಾಲಕ್ಕೆ ಎಂಥ ರಾಜ್ಯಪಾಲರನ್ನು ಕಳುಹಿಸಿದ್ದರೆಂದು ನಿಮಗೆ ಗೊತ್ತು. ಅವರನ್ನು ಹೊಡೆದೋಡಿಸಬೇಕಾಯಿತು.

ಈಗ ಆರ್ಥಿಕ ಆಶ್ವಾಸನೆಗಳಕುರಿತು ವಿಚಾರ ಮಾಡೋಣ. ಬೇರೆ ಬೇರೆ ರಾಜ್ಯಗಳಿಗೆ ಎಷ್ಟು ಧನ ಸಹಾಯ ಮಾಡಬೇಕೆಂದು ನಿರ್ಧರಿಸಲು ಯೋಜನಾ ಆಯೋಗವೊಂದಿದೆ. ಕೇಂದ್ರ ಸರ್ಕಾರ ನಿರ್ಧರಿಸಿದ ನಂತರ ನಮ್ಮನ್ನು ಸಂಪರ್ಕಿಸಲಾಗುತ್ತಿದೆ. ರಾಜ್ಯಗಳನ್ನು ಕೇಳುವುದೇ ಇಲ್ಲ. ಆರನೇ ಪಂಚವಾರ್ಷಿಕ ಯೋಜನೆ ನಿರುಪಯೋಗವೆಂದು ನಾವು ಮೊದಲೇ ಹೇಳಿದ್ದೆವು. ಬಡವರು ಬಡವರಾಗಿಯೇ ಉಳಿಯುತ್ತಾರೆಂದೂ ಶ್ರೀಮಂತರು ಶ್ರೀಮಂತರಾಗುತ್ತಾರೆಂದೂ, ಅತ್ಯಾವಶ್ಯಕ ವಸ್ತುಗಳ ಬೆಲೆ ಏರುತ್ತಲೆ ಹೋಗುತ್ತದೆಂದೂ, ಜನರ ಕೊಳ್ಳುವ ಶಕ್ತಿ ಕಡಿಮೆ ಯಾಗುತ್ತದೆಂದೂ, ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತದೆಂದೂ ನಾವು ತಿಳಿದಿದ್ದೆವು. ಆದ್ದರಿಂದ 6ನೇ ಪಂಚವಾರ್ಷಿಕ ಯೋಜನೆಗೆ ನಾವು ಬೆಂಬಲ ನೀಡುವುದರಲ್ಲಿ ಏನೂ ಅರ್ಥವಿಲ್ಲೆಂದು ಇಂದಿರಾಗಾಂಧಿಗೆ ಹೇಳಿದ್ದೆವು. ಪಶ್ಚಿಮ ಬಂಗಾಲ, ತ್ರಿಪುರ, ಕೇರಳ ಸರಕಾರಗಳು ಆರನೇ ಯೋಜನೆಗೆ ಮಂಜೂರಿ ನೀಡಲು ನಿರಾಕರಿಸಿದ್ದವು. ಯಾಕೆಂದರೆ ನಾವು ಜನರಿಗೆ ಸುಳ್ಳು ಹೇಳಲು ತಯಾರಿಲ್ಲ.

ಆರನೇ ಯೋಜನೆಯ ಪ್ರತಿಫಲವೇನು ? ಅಗ್ಗದರದ ಅಂಗಡಿಗಳ ಮೂಲಕ ವಿತರಣೆ ಮಾಡುವ ಅಕ್ಕಿ, ಗೋದಿ, ಸಕ್ಕರೆ, ಸೀಮೆ ಎಣ್ಣೆ ಗಳ ಬೆಲೆ ನಾಲ್ಕಾರು ಪಟ್ಟು ಹೆಚ್ಚಾಗಿವೆ. ಪೆಟ್ರೋಲ್, ಕಲ್ಲಿದ್ದಲು, ಉಕ್ಕು, ಸಿಮೆಂಟ್, ಹಾಗೆಯೇ ರೇಲ್ವೆ ಪ್ರಯಾಣದ, ಅದರ ಸರ್‌ಚಾರ್ಜಿನ ಬೆಲೆಗಳೆಲ್ಲ ಬಹಳಷ್ಟು ಜಾಸ್ತಿಯಾಗಿವೆ. ಇದರಿಂದಾಗಿ ದೇಶಾದ್ಯಂತ ಬೆಲೆ ಹೆಚ್ಚಾಗಿ ಜನರ ಕೊಳ್ಳುವ ಶಕ್ತಿ ಇಳಿಮುಖವಾಗಿದೆ.

ಇಂದಿರಾ ಗಾಂಧಿ ಅಧಿಕಾರಕ್ಕೆ ಬಂದಾಗ ನಿರುದ್ಯೋಗಿಗಳ ಸಂಖ್ಯೆ 1.5 ಕೋಟಿ ಇತ್ತು. ಈಗ ಅದು 2.25 ಕೋಟಿಯಾಗಿದೆ. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರನ್ನು ನೋಂದಾಯಿಸದವರು ಇನ್ನೂ ಎಷ್ಟೋ ಸಹಸ್ರ ಜನರಿದ್ದಾರೆ.

ಪಶ್ಚಿಮ ಬಂಗಾಲಕ್ಕೆ ಅತಿ ಹೆಚ್ಚು ಹಣ ಸಹಾಯ ಮಾಡಲಾಗಿದೆಂದು ರಾಜೀವಗಾಂಧಿ ಹೇಳುತ್ತಾರೆ. ಆದರೆ ಕೇಂದ್ರದ ಲೆಕ್ಕಪತ್ರ ಹಾಗೆಯೇ ಲೋಕಸಭೆಯಲ್ಲಿ ಮಂತ್ರಿಗಳ ಹೇಳಿಕೆ ಪ್ರಕಾರ 1960 ರಿಂದಲೂ ಪಶ್ಚಿಮ ಬಂಗಾಲಕ್ಕೆ ಕೊಡಮಾಡುವ ಧನ ಸಹಾಯ ಕಡಿಮೆಯಾಗುತ್ತಲೇ ಇದೆಂದು ಕಂಡು ಬರುತ್ತದೆ. ರಾಜೀವ ಗಾಂಧಿಗೆ ಈ ರೀತಿ ಬುದ್ಧಿ ಹೇಳುವವರು ಅವನನ್ನು ಯಾವ ತೆಗ್ಗಿಗೆ ಎಳೆಯೊಯ್ಯುತ್ತಾರೆಂದು ಹೇಳುವುದು. ಕಷ್ಟ.

ಕಲ್ಲಿದ್ದಲು ಪಶ್ಚಿಮ ಬಂಗಾಲ ಮತ್ತು ಬಿಹಾರದಲ್ಲಿ ಸಿಗುತ್ತದೆ. ಸ್ವಾತಂತ್ರ್ಯದ ಪೂರ್ವದಿಂದಲೂ ಇಲ್ಲಿ ಉಕ್ಕು ಉತ್ಪಾದನೆಯಾಗುತ್ತಿದೆ. ದೇಶಾದ್ಯಂತ ಇವುಗಳ ಬೆಲೆ ಏಕಪ್ರಕಾರವಾಗಿದೆ. ಆದರೆ ಇತರ ಕಚ್ಚಾ ವಸ್ತುಗಳ ಬೆಲೆ ದೇಶಾದ್ಯಂತ ಏಕ ಪ್ರಕಾರವಾಗಿಲ್ಲ. ಈ ರೀತಿಯಲ್ಲಿ ದೇಶದ ಐಕ್ಯತೆಯನ್ನುಳಿಸಲು ಸಾಧ್ಯವಿದೆಯೇ ?

ಪಶ್ಚಿಮ ಬಂಗಾಲದಲ್ಲಿ ಸ್ಥಾಪನೆಯಾಗಬೇಕಾದ ವಿದ್ಯುಚ್ಛಕ್ತಿ ಯೋಜನೆಗಳಿಗೆ, ಹಡಗು ನಿರ್ಮಾಣ ಅದರ ರಿಪೇರಿ ಕೈಗಾರಿಕೆಗಳಿಗೆ, ರಕ್ಷಣಾ ಕೈಗಾರಿಕೆಗಳ ವಿಸ್ತರಣೆಗಳಿಗೆಲ್ಲ ಏನಾಗಿದೆ ? ರಕ್ಷಣೆಗಾಗಿ ಕೋಟ್ಯಾವಧಿ ರೂಪಾಯಿ ಹಣ ಖರ್ಚಾಗುತ್ತಿರುವಾಗ ಪಶ್ಚಿಮ ಬಂಗಾಲದಲ್ಲಿ ಕಾರ್ಖಾನೆಗಳು ಮುಚ್ಚಲ್ಪಡುತ್ತಿವೆ.

ಇನ್ನು ಕ್ವಾಯ್ದೆ-ಕಾನೂನಿನ ಪ್ರಶ್ನೆ ಎತ್ತಿ ಕೊಂಡರೆ, ಕಾಂಗ್ರೈ ಆಡಳಿತೆಯಲ್ಲಿರುವ ರಾಜ್ಯಗಳಲ್ಲಿ ದಿನನಿತ್ಯ ಕೊಲೆ, ಸುಲಿಗೆ, ಜಾತೀಯ ಗಲಭೆಗಳು ನಡೆಯುತ್ತಿವೆ. ಪಶ್ಚಿಮ ಬಂಗಾಲದಲ್ಲಿ ಮತೀಯ ಗಲಭೆಗಳಿಲ್ಲ, ಇಂದಿರಾ ಕಾಂಗ್ರೆಸ್ ತನ್ನ ಚುನಾವಣಾ ಆಶ್ವಾಸನೆಗಳನ್ನು ಪೂರೈಸಿಲ್ಲದ ಕಾರಣ ಅದನ್ನು ಸೋಲಿಸಬೇಕು.

## ಹಮಾಲಿ ಕಾರ್ಮಿಕರ ವಸತಿಗೆ ಒತ್ತಾಯ

ರಾಯಚೂರಿನ ಹಮಾಲಿ ಕಾರ್ಮಿಕರಿಗೆ ವಸತಿ ಸೌಲಭ್ಯ ಕಲ್ಪಿಸಿಕೊಡಲು ಕೋರಿ ಅಧಿಕಾರಿಗಳಿಗೆ ಹಲವು ಮನವಿಗಳನ್ನು ಸಲ್ಲಿಸಲಾಗಿತ್ತು. ಆದರೆ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಿರಲಿಲ್ಲ. ಅಧಿಕಾರಿಗಳ ಕಾರ್ಯವಿಳಂಬ ನೀತಿಯನ್ನು ಪ್ರತಿಭಟಿಸಿ, 14-11-84 ರಂದು ಹಮಾಲರ ಸಂಘದ ನೇತೃತ್ವದಲ್ಲಿ ಸುಮಾರು 150 ಕಾರ್ಮಿಕರು ಬಿ.ಡಿ.ಓ. ಆಫೀಸಿಗೆ ಮೆರವಣಿಗೆಯಲ್ಲಿ ತೆರಳಿ ಬೇಡಿಕೆಗಳನ್ನು ಈಡೇರಿಸಲು ಅಧಿಕಾರಿಗಳನ್ನು ಆಗ್ರಹಪಡಿಸಿದರು.

ನಂತರ ಜರುಗಿದ ಸಭೆಯನ್ನುದ್ದೇಶಿಸಿ ಸಂಗಾತಿಗಳಾದ ಬಾಬುಮಿಯಂಕ ರಾಜಾಸಾಬ, ಜಿ. ವೆಂಕನಗೌಡ, ಸೂ. ರಪ್ಪ ಗದ್ರಟಗಿಯವರು ಮಾತನಾಡಿದರು.

# ಕಾಂಗ್ರೆಸ್ (ಐ) ಸರಕಾರ ಹಾಗೂ ಕಾರ್ಮಿಕ ವರ್ಗ : 1980-84

1980 ರಲ್ಲಿ ಕಾಂಗ್ರೆಸ್ [ಐ] ಕೇಂದ್ರದಲ್ಲಿ ಭಾರೀ ಬಹುಮತದಿಂದ ಅಧಿಕಾರಕ್ಕೆ ಮರಳಿದ್ದು ಜನತಾ ಪಕ್ಷ ಹೋಳು-ಹೋಳಾದ ಹಿನ್ನೆಲೆಯಲ್ಲಿ. ಕುಪ್ರಸಿದ್ಧ ಭೂತಲಿಂಗಂ ವರದಿ ಆಧಾರಿತ ಆದಾಯ ಮತ್ತು ವೇತನ ಧೋರಣೆ, ಮುಷ್ಕರದ ಹಕ್ಕನ್ನು ಕಸಿದುಕೊಳ್ಳ ಬೇಕೆಂದಿದ್ದ 1978 ರ ದುಷ್ಟ 'ಕೈಗಾರಿಕಾ ಸಂಬಂಧಗಳ ಮಸೂದೆ' ಇತ್ಯಾದಿಗಳ ಮೂಲಕ ಜನತಾ ಪಕ್ಷ ಕಾರ್ಮಿಕ ವರ್ಗದಿಂದ ದೂರ ಸರಿದಿತ್ತು. ಪಶ್ಚಿಮ ಬಂಗಾಳ, ತ್ರಿಪುರಾ ಮತ್ತು ಸ್ವಲ್ಪ ಮಟ್ಟಿಗೆ ಕೇರಳದಲ್ಲಿ ಬಿಟ್ಟು ಉಳಿದೆಡೆ ಉತ್ತಮ ಪರ್ಯಾಯವಿಲ್ಲದ ಕಾರಣ ಕಾರ್ಮಿಕರು ಮತ್ತೆ ಕಾಂಗ್ರೆಸ್ [ಐ] ನತ್ತ ಸರಿದಿದ್ದರು.

ಕಾಂಗ್ರೆಸ್ [ಐ] ಮತ್ತೆ ಅಧಿಕಾರಕ್ಕೆ ಬಂದ ವರ್ಷ ಅಂದರೆ 1980 ರಲ್ಲಿ ಕೈಗಾರಿಕಾ ವಿವಾದಗಳ ಸಂಖ್ಯೆ ಇಳಿಮುಖವಾಯಿತು ಎಂಬುವೇನೋ ನಿಜ. ಆದರೆ ಇದಕ್ಕೆ ಕಾರಣ ಅಧಿಕಾರದಿಂದ ಹೊರಗುಳಿದಿದ್ದ ಕಾಂಗ್ರೆಸ್ [ಐ]ಗೆ ಬುದ್ಧಿ ಬಂದಿತ್ತು ಎಂದೇನೂ ಅಲ್ಲ. ಆದರೆ ಕಾರ್ಮಿಕ ವರ್ಗದ ಒಂದು ದೊಡ್ಡ ವಿಭಾಗ ಹೀಗೆಂದೇ ನಿರೀಕ್ಷಿಸಿ ಸ್ವಲ್ಪ ಸಮಯ ಕಾಯಲು ನಿರ್ಧರಿಸಿತ್ತು ಎಂಬುದು ಒಂದು ಕಾರಣ ಅವರ ನಿರೀಕ್ಷೆ ಸುಳ್ಳಾಯಿತು. ಕೈಗಾರಿಕಾ ವಿವಾದಗಳು ಕಡಿಮೆಯಾಗಲು ಮುಖ್ಯ ಕಾರಣ ಆದಾಗಲೇ 1978 ಮತ್ತು 1979 ರಲ್ಲಿ ಹೆಚ್ಚಿನ ಸಂಘಟಿತ ಕ್ಷೇತ್ರಗಳಲ್ಲಿ ಪ್ರಮುಖ ಒಪ್ಪಂದಗಳು ಆಗಿಬಿಟ್ಟಿದ್ದವು. ತುರ್ತುಪರಿಸ್ಥಿತಿ ಕಾಲದಲ್ಲಿ ಕಾರ್ಮಿಕ ವರ್ಗದ ಐಕ್ಯತೆಯಲ್ಲಿ ಬಂದಿದ್ದ ಒಡಕು ಹೋರಾಟಗಳ ಒರೆಗಲ್ಲಿನಲ್ಲಿ ಮತ್ತೆ ಬೆಸೆದಿತ್ತು. ಜನತಾಪಕ್ಷದ 'ಕೈಗಾರಿಕಾ ಸಂಬಂಧಗಳ ಮಸೂದೆ' ವಿರುದ್ಧ ನಡೆದ ಕಾರ್ಮಿಕರ 'ಸಂಸತ್ತು ಚಲೋ'ದ ಅಭೂತಪೂರ್ವ ಯಶಸ್ಸು ಇದಕ್ಕೊಂದು ಉದಾಹರಣೆ.

## ತಕ್ಷಣ ಆಕ್ರಮಣ ಆರಂಭ

ಆದರೆ ಹಲವರು ನಿರೀಕ್ಷಿಸಿದ್ದಂತೆ ಕಾಂಗ್ರೆಸ್ [ಐ]ಗೆ ಒಳ್ಳೆ ಬುದ್ಧಿ ಬಂದಿರಲಿಲ್ಲ. ಅದು ಅಧಿಕಾರಕ್ಕೆ ಮರಳಿದ ಕೂಡಲೇ ಬ್ಯೂರೋ ಆಫ್ ಪಬ್ಲಿಕ್ ಎಂಟರ್ ಪ್ರೈಸಸ್ [ಬಿ.ಪಿ.ಇ.] ತನ್ನ ಒಪ್ಪಿಗೆಯಿಲ್ಲದೆ ಯಾವುದೇ ಒಪ್ಪಂದಗಳನ್ನು ನಡೆಸಬಾರದೆಂದು ಸುತ್ತೋಲೆ ಹೊರಡಿಸಿತು. ಪರಿಣಾಮವಾಗಿ ಸಾಮೂಹಿಕ ಚೌಕಾಸಿಯ ಹಕ್ಕು ತತ್ಕಾಲ ಸ್ಥಗಿತಗೊಂಡಂತಾಯಿತು. ಇದು ನಂತರದ ಐದು ವರ್ಷಗಳ ಕಾರ್ಮಿಕ ವಿರೋಧೀ ಆಡಳಿತದ ಮುನ್ಸೂಚನೆಯಾಗಿತ್ತಷ್ಟೆ.

ಅಧಿಕಾರಕ್ಕೆ ಮರಳಿದ ಆರೇ ತಿಂಗಳೊಳಗೆ ಆರನೇ ಪಂಚವಾರ್ಷಿಕ ಯೋಜನೆಯ ಕೂಲಿ ಮತ್ತು ಆದಾಯ ಧೋರಣೆಯ ಮೂಲಕ ಕಾರ್ಮಿಕ ವರ್ಗದ ವಿರುದ್ಧ ಆಕ್ರಮಣ ಆರಂಭವಾಯಿತು. ಬಂಡವಾಳಶಾಹಿಗಳು ಮತ್ತು ಕಾರ್ಮಿಕರ ನಡುವೆಯಾಗಲೀ, ಭೂಮಾಲಕರು ಮತ್ತು ರೈತರ ನಡುವೆಯಾಗಲೀ ಇರುವ ಅಗಾಧ ಆರ್ಥಿಕ ಅಸಮಾನತೆಯನ್ನು ನಿವಾರಿಸುವ ಬಗ್ಗೆ ಚಕಾರವನ್ನೂ ಎತ್ತದ ಈ ಧೋರಣೆ ಕಾರ್ಮಿಕ-ಕಾರ್ಮಿಕರ ನಡುವಿನ ವ್ಯತ್ಯಾಸವನ್ನು ತೊಲಗಿಸಬೇಕು ಅಂದರೆ ಹೆಚ್ಚು ವೇತನ ಪಡೆಯುತ್ತಿದ್ದ ಕಾರ್ಮಿಕನ ವೇತನವನ್ನು ಕಡಿತಗೊಳಿಸಬೇಕು ಎಂದು ಉದ್ದೇಶಿಸಿತು; ಯಾವುದೇ ವೇತನ ಹೆಚ್ಚಳವಾಗಬೇಕಾದರೆ ಅದು ಉತ್ಪಾದಕತೆಯನ್ನು ಆಧರಿಸಿರಬೇಕು. ಈ ಉತ್ಪಾದಕತೆ ಕೇವಲ ಸಂಬಂಧ ಪಟ್ಟ ಕೈಗಾರಿಕೆಯದ್ದು ಮಾತ್ರವಲ್ಲ, ಸಮಸ್ತ ಆರ್ಥಿಕ ವ್ಯವಸ್ಥೆಯದ್ದು ! ಅದು ಹಾಕಿದ ಶರತ್ತಿದು. ವಾಸ್ತವವಾಗಿ ಇದು ವೇತನ ಸ್ತಂಭನ ನೀತಿಯೇ ಆಗಿತ್ತು.

ಬಿ.ಪಿ.ಇ. ಈ ವೇತನ ಸ್ತಂಭನ ನೀತಿಯನ್ನು ಮತ್ತಷ್ಟು ಮೂರ್ತಗೊಳಿಸಿತು; ಯಾವುದೇ ವೇತನ ಹೆಚ್ಚಳ ಉತ್ಪಾದಕತೆಯನ್ನು ಆಧರಿಸಿದ್ದು 10./. ಕ್ಕಿಂತ ಹೆಚ್ಚಾಗಬಾರದು, ತುಟ್ಟಿ ಭತ್ಯದ ದರ ಪಾಯಿಂಟಿಗೆ ರೂ. 1.30 ಕ್ಕಿಂತ ಜಾಸ್ತಿಯಾಗಿರಬಾರದು ಎಂದು ಅದು ಒತ್ತಾಯಿಸಲಾರಂಭಿಸಿತು.

ಇಲ್ಲಿ ಕಾಂಗ್ರೆಸ್ [ಐ] ಸರಕಾರದ ದುರುದ್ದೇಶ ಸ್ಪಷ್ಟವಾಗಿತ್ತು. ತನ್ನ ತಪ್ಪು ಧೋರಣೆಗಳಿಂದಾಗಿ ಉಂಟಾಗಿದ್ದ ಆರ್ಥಿಕ ಬಿಕ್ಕಟ್ಟನ, ಆಡಳಿತ ವರ್ಗಗಳ ಅದಕ್ಷತೆ ಹಾಗೂ ಅಯೋಗ್ಯತೆಯಿಂದಾಗಿ ಮತ್ತು ಭ್ರಷ್ಟಾಚಾರೀ ವರ್ತನೆಗಳಿಂದಾಗಿ ಉಂಟಾಗಿದ್ದ ಸಮಸ್ಯೆಗಳ ಹೊರೆಯನ್ನು ಉತ್ಪಾದಕತೆಯ ಹೆಸರಿನಲ್ಲಿ ಕಾರ್ಮಿಕ ವರ್ಗದ ಮೇಲೆ ದಾಟಿಸಬೇಕೆಂಬುದೇ ಈ ಧೋರಣೆಯ ತಿರುಳು.

## ಒಪ್ಪಂದಗಳನ್ನು ಮುರಿಯಿತು

ಈ ಧೋರಣೆಯನ್ನು ಪ್ರಕಟಗೊಳಿಸಿದ ತಕ್ಷಣದಿಂದಲೇ ಅದಾಗಲೇ ಮಾಡಿಕೊಂಡಿದ್ದ ಒಪ್ಪಂದಗಳನ್ನು ಮುರಿಯುವ ಪ್ರಕ್ರಿಯೆ ಆರಂಭವಾಯಿತು. ಎಲ್.ಐ.ಸಿ. ನೌಕರರ ಮೇಲಿನ ಆಕ್ರಮಣ ಇದರಲ್ಲಿ ಮೊದಲನೆಯದ್ದು. 1974 ರಲ್ಲಿ ಅವರು ಆಡಳಿತ ವರ್ಗದೊಂದಿಗೆ ಮಾಡಿಕೊಂಡಿದ್ದ ಒಪ್ಪಂದದಲ್ಲಿ ಬೆಲೆಯೇರಿಕೆಯಿಂದ ನಾಲ್ಕನೇ ದರ್ಜೆಯ ನೌಕರರಿಗೆ ಪೂರ್ಣ ಪ್ರಮಾಣದಲ್ಲಿ ಹಾಗೂ ಮೂರನೇ ದರ್ಜೆಯ ನೌಕರರಲ್ಲಿ ಶೇ 75 ಪರಿಹಾರ ದೊರಕಿಸುವ ತುಟ್ಟಿ ಭತ್ಯ ವ್ಯವಸ್ಥೆ ಪಡೆದು ಕೊಂಡದ್ದೇ ಅವರ ದೊಡ್ಡ ತಪ್ಪಾಗಿತ್ತು ! ಒಂದು ವಿಶೇಷ ಕಾನೂನಿನ ಮೂಲಕ ಆ ಒಪ್ಪಂದವನ್ನು ಮುರಿಯಲಾಯಿತು.

ಆಕ್ರಮಣದ ನಂತರದ ಸರದಿ ಬೆಂಗಳೂರು ಹಾಗೂ ಹೈದರಾಬಾದಿನ ಸಾರ್ವಜನಿಕ ವಲಯದ ಕೈಗಾರಿಕೆಗಳದಾಗಿತ್ತು. ಸಮಾನ ರೀತಿಯ ಇತರ ಕೈಗಾರಿಕೆಗಳಲ್ಲಿ ಉತ್ತಮ ಒಪ್ಪಂದವಾದರೆ ಅದನ್ನು ಈ ಕೈಗಾರಿಕೆಗಳಲ್ಲೂ ಜ್ಯಾರಿಗೊಳಿಸಬೇಕೆಂದು ಮಾಡಿಕೊಂಡಿದ್ದ ಒಪ್ಪಂದವನ್ನು ಮಾನ್ಯಮಾಡಲು ಸರ್ಕಾರ ನಿರಾಕರಿಸಿತು. ಅಖಿಲ ಭಾರತ ಲೋಕೋ ರನ್ನಿಂಗ್ ಸ್ಟಾಫ್ ಅಸೋಸಿಯೇಶನ್ ಜತೆಗೆ ಸಿಬ್ಬಂದಿ ಪುನರ್ ವ್ಯವಸ್ಥೆ ಹಾಗೂ ಗರಿಷ್ಠ 10 ಗಂಟೆಗಳ ಡ್ಯೂಟಿ ಬಗ್ಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನೂ ಏಕಪಕ್ಷೀಯವಾಗಿ ಮುರಿಯಲಾಯ್ತು.

> 8 ನೇ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ (ಐ) ಮತ್ತೆ ಕಾರ್ಮಿಕವರ್ಗಕ್ಕೆ ಹಾಗೂ ಇತರ ಜನ ವಿಭಾಗಗಳಿಗೆ ಹಲವು ಆಶ್ವಾಸನೆಗಳನ್ನು ಕೊಡಲಾರಂಭಿಸಿದೆ. ಆದರೆ ಭಾರತದ ಕಾರ್ಮಿಕವರ್ಗ ಕಳೆದ ಐದು ವರ್ಷಗಳ ಕಾಂಗ್ರೆಸ್ [ಐ] ಆಡಳಿತದಲ್ಲಿ ಅನುಭವಿಸಿದ ಅಗಣಿತ ಸಂಕಷ್ಟಗಳನ್ನು ದಬ್ಬಾಳಿಕೆಯನ್ನು ಮರೆಯಲು ಸಾಧ್ಯವಿಲ್ಲ. ಯಾಕೆಂದರೆ ಕಾರ್ಮಿಕರ ಕಲ್ಯಾಣವಾಗಲೀ, ದಲಿತರ ಉದ್ಧಾರವಾಗಲೀ, ರಾಷ್ಟ್ರೀಯ ಸಮಗ್ರತೆಯ ರಕ್ಷಣೆಯಾಗಲೀ, ವಿವಿಧ ಜನ ವಿಭಾಗಗಳ ನಡುವೆ ಸಾಮರಸ್ಯ ಸಾಧಿಸುವುದಾಗಲೀ ಅದಕ್ಕೆ ಅಸಾಧ್ಯ ಎಂಬುದಕ್ಕೆ ಈ ಐದು ವರ್ಷಗಳೇ ಸಾಕ್ಷಿ. ಅದೇ ರೀತಿ ವಿವಿಧ ವೇಷಗಳ ಕೋಮುವಾದಿಗಳು ಮಾಡಿರುವ ಅನಾಹುತಗಳನ್ನೂ ಕಾರ್ಮಿಕವರ್ಗ ಮರೆಯುವುದು ಸಾಧ್ಯವಿಲ್ಲ. ಭಾರತದ ಕಾರ್ಮಿಕ ವರ್ಗದ ಮುಂದೆ ಈಗಿರುವ ಮುಖ್ಯ ಜವಾಬ್ದಾರಿಯೆಂದರೆ ಈ ಚುನಾವಣೆಗಳಲ್ಲಿ ಕಾಂಗ್ರೆಸ್ [ಐ] ನ್ನು ಸೋಲಿಸಿ, ಕೋಮುವಾದಿಗಳನ್ನು ನಿರಾಕರಿಸಿ ಎಡ, ಪ್ರಜಾಪ್ರಭುತ್ವವಾದೀ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಆರಿಸಿ ತರುವುದು. ಶಕ್ತಿಶಾಲೀ ಎಡಪಂಥವನ್ನು ಹೊಂದಿರುವ ಒಂದು ಸಂಸತ್ತು ಮಾತ್ರ ದೇಶವನ್ನು ಈಗಿನ ಆರ್ಥಿಕ ಕೊಚ್ಚೆಯಿಂದ ಮೇಲಕ್ಕೆತ್ತಬಲ್ಲುದು.

ಮೋದೀ ನಗರದ ಕಾರ್ಮಿಕರಿಗೆ ಹಿಂದಿನ ಸರ್ಕಾರದ ಪ್ರಧಾನ ಮಂತ್ರಿ ನೀಡಿದ್ದ ಆಶ್ವಾಸನೆಯಂತೆ ನಡೆದುಕೊಳ್ಳಲು, ಅದನ್ನು ಜ್ಯಾರಿಗೊಳಿಸಲು ಕಾಂಗ್ರೆಸ್ [ಐ] ಸರ್ಕಾರ ನಿರಾಕರಿಸಿತು. ಉತ್ತರ ಪ್ರದೇಶದ ಕಾಂಗ್ರೆಸ್ [ಐ] ಸರ್ಕಾರ ತಾನೇ ನಿಗದಿಪಡಿಸಿದ್ದ ಕನಿಷ್ಠ ವೇತನಗಳನ್ನು ಜ್ಯಾರಿಮಾಡುವಲ್ಲಿ ಮಧ್ಯ ಪ್ರವೇಶಿಸಲು ನಿರಾಕರಿಸಿದ ಕಾರಣ ರಾಂಪುರದ ರೇಝಾ ಟೆಕ್ಸ್‌ಟೈಲ್ಸ್ ಕಾರ್ಮಿಕರು ಒಂಭತ್ತು ತಿಂಗಳ ಕಾಲ ಹೋರಾಟ ನಡೆಸಬೇಕಾಗಿ ಬಂತು.

## ಸಂಘಟನಾ ಹಕ್ಕುಗಳ ಮೇಲೆ ದಾಳಿ

ಕಾರ್ಮಿಕವರ್ಗ ಈ ಎಲ್ಲಾ ಆಕ್ರಮಣಗಳು ಬರುತ್ತಿದ್ದಾಗ ಕೈಕಟ್ಟಿ ಕೂರುವುದಿಲ್ಲ, ಹೋರಾಟಗಳು ಪ್ರಬಲಗೊಳ್ಳುತ್ತವೆ ಎಂದು ಮುಂದಾಗಿ ನಿರೀಕ್ಷಿಸಿದ ಕಾಂಗ್ರೆಸ್ (ಐ) ಸರಕಾರ ಒಂದಾದ ಮೇಲೊಂದರಂತೆ ಕಾರ್ಮಿಕ ವಿರೋಧಿ ಕಾನೂನುಗಳನ್ನು ಜ್ಯಾರಿಗೊಳಿಸಲಾರಂಭಿಸಿತು. 1980 ರ ಆಗಸ್ಟ್‌ನಲ್ಲಿ ಜ್ಯಾರಿಗೊಳಿಸಿದ ಎನ್. ಎಸ್. ಎ. ತುರ್ತು ಪರಿಸ್ಥಿತಿಯ ಕರಾಳ ದಿನಗಳ "ಮೀಸಾ" ದ ಹೊಸ ಹೆಸರಾಗಿತ್ತಷ್ಟೇ. ಇದನ್ನು ಕಾರ್ಮಿಕ ಮುಖಂಡರ ವಿರುದ್ಧ ಬಳಸುವುದಿಲ್ಲ ಎಂದು ಹೇಳಿದರೂ ಸಾರ್ವಜನಿಕ ವಲಯದ ಕೈಗಾರಿಕೆಗಳಲ್ಲಿ ಹೋರಾಟಗಳು ಆರಂಭವಾದ ತಕ್ಷಣ ಈ ಆಶ್ವಾಸನೆ ಗಾಳಿಯಲ್ಲಿ ತೂರಿಹೋಯಿತು.

ಕರ್ನಾಟಕದಲ್ಲೂ ಆಗಿನ ಕಾಂಗ್ರೆಸ್ [ಐ] ಸರ್ಕಾರ ಅವಶ್ಯಕ ಸೇವಾ ನಿರ್ವಹಣಾ ಕಾನೂನನ್ನು ತಿದ್ದುಪಡಿಗೊಳಿಸಿ ವಿಚಾರಣೆಯಿಲ್ಲದೆ ಬಂಧನಕ್ಕೆ ಹಾಗೂ ಗಡೀಪಾರಿಗೆ ಅನುವು ಮಾಡಿ ಹೊರಡಿಸಿದ ಸುಗ್ರೀವಾಜ್ಞೆಯನ್ನು ಮೊದಲು ಪ್ರಯೋಗಿಸಿದ್ದು ಸಿ. ಐ. ಟಿ. ಯು. ನ ರಾಜ್ಯ ಸಮಿತಿ ಅಧ್ಯಕ್ಷ ಸೂರ್ಯನಾರಾಯಣ ರಾವ್ ಅವರ ಮೇಲೇನೇ. ಮೈಕೋ ಕಾರ್ಮಿಕ ಸಂಘವನ್ನು ಕಬಳಿಸಲು ಎಫ್. ಎಂ. ಖಾನ್ ಗೆ ಅವಕಾಶ ಮಾಡಿಕೊಡುವುದೇ ಇದರ ಉದ್ದೇಶವಾಗಿತ್ತು.

ಕಾರ್ಮಿಕ ಆಂದೋಲನದ ಮೇಲೆ ಕಾಂಗ್ರೆಸ್ [ಐ] ಸರ್ಕಾರದ ಈ ಎಲ್ಲಾ ಆಕ್ರಮಣಗಳ ವಿರುದ್ಧ ವಿವಿಧ ವಿಭಾಗಗಳು ನಡೆಸಿದ ಹೋರಾಟಗಳ ಅನುಭವದ ಫಲವಾಗಿ ಮುಂಬೈಯಲ್ಲಿ 1981 ರ ಜುಲೈ 4 ರಂದು 8 ಅಖಿಲ ಭಾರತ ಕಾರ್ಮಿಕ ಸಂಘಟನೆಗಳ ಕೇಂದ್ರಗಳು ಹಾಗೂ 40 ರಾಷ್ಟ್ರೀಯ ಒಕ್ಕೂಟಗಳು ಒಂದೇ ವೇದಿಕೆಯ ಮೇಲೆ ಬಂದು ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಲನ ಸಮಿತಿ ಮೂಡಿ ಬಂದಿತು. ಈ ಮೊದಲ ಸಮಾವೇಶದಲ್ಲಿ ಸಮಿತಿ ಪ್ರಮುಖ ಧೋರಣೆಗಳಬಗ್ಗೆ ಪರಸ್ಪರ ಮಾತುಕತೆ ನಡೆಸೋಣವೆಂದು ಕೇಂದ್ರ ಸರ್ಕಾರಕ್ಕೆ ಕರೆ ನೀಡಿದರೂ ಕೂಡಾ ಅದನ್ನು ನಿರ್ಲಕ್ಷಿಸಿ ಕಾಂಗ್ರೆಸ್ (ಐ) ಸರ್ಕಾರ ಕಾರ್ಮಿಕರ ಸಂಘಟನೆಯ ಹಕ್ಕುಗಳನ್ನೆಲ್ಲಾ ಕಸಿದುಕೊಳ್ಳುವ ಅವಶ್ಯಕ ಸೇವಾ ನಿರ್ವಹಣಾ ಸುಗ್ರೀವಾಜ್ಞೆ [ESMA] ಯನ್ನು ಹೊರಡಿಸಿತು.

1982ರ ಏಪ್ರಿಲ್ ಹೊತ್ತಿಗೆ ಮತ್ತೆ ನಾಲ್ಕು ಕಾರ್ಮಿಕ-ವಿರೋಧಿ ಮಸೂದೆಗಳನ್ನು ಕಾಂಗ್ರೆಸ್ [ಐ] ಕೇಂದ್ರ ಸರಕಾರ ಮಂಡಿಸಿತು. ಇವು ಆಸ್ಪತ್ರೆಗಳು, ಶೈಕ್ಷಣಿಕ ಹಾಗೂ ಇತರ ಸಂಸ್ಥೆಗಳ ಲಕ್ಷಗಟ್ಟಲೆ ಕಾರ್ಮಿಕರನ್ನು ಕೈಗಾರಿಕಾ ವಿವಾದಗಳ ಶಾಸನದ ವ್ಯಾಪ್ತಿಯಿಂದ ಹೊರಗೆ ಹಾಕಿದ್ದು ಮಾತ್ರವಲ್ಲದೆ ಕಾರ್ಮಿಕ ಸಂಘಗಳ ಮೇಲೆ ತೀವ್ರ ಮಿತಿಗಳನ್ನು ಹೇರಿದವು. ಗಮನೀಯ ಅಂಶವೇನೆಂದರೆ ಇವುಗಳಲ್ಲಿ ಕೆಲವನ್ನು ಹಿಂದೆ ಸುಪ್ರೀಂ ಕೋರ್ಟು ಕೈಗಾರಿಕೆಯ ನಿರೂಪಣೆ ಕುರಿತಾದ ತನ್ನ ತೀರ್ಪಿನ ಮೂಲಕ ಅಸಿಂಧುಗೊಳಿಸಿತ್ತು. ಹೋರಾಟ ನಿರತ ಕಾರ್ಮಿಕರಿಗೆ ಕೇವಲ 25 ಪೈಸೆ ಕಾಣಿಕೆ ನೀಡಿದರೂ ಅದೊಂದು ಘೋರ ಅಪರಾಧವೆಂದು ಪರಿಗಣಿಸುವಂತಹ ದುಷ್ಟ ಅಂಶಗಳು ಈ ಮಸೂದೆಗಳಲ್ಲಿದ್ದವು.

## ಐ. ಎಂ. ಎಫ್. ದೊರೆಗಳ ಪ್ರೀತ್ಯರ್ಥ

ಇಷ್ಟು ಬೇಗನೇ ಕಾಂಗ್ರೆಸ್ (ಐ) ಕೇಂದ್ರ ಸರಕಾರ ಕಾರ್ಮಿಕ ವರ್ಗದ ವಿರುದ್ಧ ಇಷ್ಟೊಂದು ರಾಕ್ಷಸೀ ಅಧಿಕಾರಗಳನ್ನು ಪಡೆಯಲು ಪ್ರಯತ್ನಿಸಲು ಕಾರಣವಾದರೂ ಏನು ? ಕಾರ್ಮಿಕ ವರ್ಗದ ಹೋರಾಟಗಳ ಸಂಖ್ಯೆ ಹಾಗೂ ತೀವ್ರತೆಯ ದೃಷ್ಟಿಯಿಂದ 1979 ರೊಂದಿಗೆ ಹೋಲಿಸಿದರೆ 1980 ಮತ್ತು 1981 ಶಾಂತಿಯುತ ವರ್ಷಗಳೆಂದೇ ಹೇಳಬೇಕು. ಆದ್ದರಿಂದ ಕಾರ್ಮಿಕ ವರ್ಗದ ಪ್ರತಿರೋಧ ತೀವ್ರಗೊಂಡುದರ ಫಲವಾಗಿ ಈ ಕರಾಳ ಶಾಸನಗಳು ಬಂದದ್ದಲ್ಲ. ಅದಕ್ಕೆ ನಿಜವಾದ ಕಾರಣ ಬೇರೆಯೇ ಆಗಿದೆ. ಭಾರತೀಯ ಆರ್ಥಿಕ ವ್ಯವಸ್ಥೆಯ ತೀವ್ರ ಬಿಕ್ಕಟ್ಟನ್ನು ಸಂಭಾಳಿಸಲಾರದ, ಸಾಮ್ರಾಜ್ಯಶಾಹೀ ದೇಶಗಳ ಮೇಲೆ ಆರ್ಥಿಕವಾಗಿ ಹೆಚ್ಚೆಚ್ಚು ಅವಲಂಬಿಸುವ ನೀತಿಯಿಂದಾಗಿ ಉಂಟಾದ ಪಾವತಿ ಬಾಕಿಯ ತೀವ್ರ ಸಮಸ್ಯೆಯನ್ನು ಎದುರಿಸಲಾರದ ಕಾಂಗ್ರೆಸ್ [ಐ] ಕೇಂದ್ರ ಸರಕಾರ ಅಂತರ್‌ರಾಷ್ಟ್ರೀಯ ಹಣಕಾಸು ನಿಧಿ [ಐ. ಎಂ. ಎಫ್.] ಯೆದುರು ಐದು ಸಾವಿರ ಕೋಟಿ ರೂಪಾಯಿಗಳ ಕುಪ್ರಸಿದ್ಧ ಸಾಲಕ್ಕೆ ಕೈಚಾಚಿತ್ತು. ಈ ಸಾಲದ ಶರತ್ತುಗಳು ಹೇಗಿದ್ದವೆಂದರೆ

ಐ.ಎಂ.ಎಫ್. ದೊರೆಗಳನ್ನು ಸುಪ್ರೀತಗೊಳಿಸಲು ತಾನು ಕಾರ್ಮಿಕ ಸಂಘಟನೆಯ ಹೋರಾಟಗಳನ್ನೆಲ್ಲಾ ನಿಜವಾಗಿಯೂ ತುಳಿದು ಹಾಕಬಲ್ಲೆ ಎಂದು ಅವರನ್ನು ನಂಬಿಸಬೇಕಾಗಿತ್ತು.

ಸರಕಾರದ ಈ ಕಾರ್ಮಿಕ-ವಿರೋಧೀ ನಿಲುವು ಸ್ಪಷ್ಟವಾದುದನ್ನು ಕಂಡ ಬಂಡವಾಳಶಾಹಿಗಳೂ ಕಾರ್ಮಿಕರ ಮೇಲೆ ಆಕ್ರಮಣ ನಡೆಸಲು ಇದೇ ಸುಸಂದರ್ಭ ಎಂದು ಮುನ್ನುಗ್ಗಿದರು. ಪರಿಣಾಮವಾಗಿ ಲಾಕೌಟುಗಳ ಸಂಖ್ಯೆ ದ್ವಿಗುಣಗೊಂಡಿತು. ಬಂಡವಾಳಶಾಹಿಗಳು ಲಾಕೌಟನ್ನು ಕಾರ್ಮಿಕರ ಮುಷ್ಕರಕ್ಕೆ ಪ್ರತಿಯಾಗಿ ಒಂದು ಪರಿಣಾಮಕಾರೀ ಆಯುಧವಾಗಿ ಬಳಸಲಾರಂಭಿಸಿದರು.

## ಬಂಡವಾಳ ಶಾಹಿಗಳಿಗೆ ವರಪ್ರಸಾದ

ಇದರ ಜತೆಗೇ ಕಾರ್ಖಾನೆಗಳನ್ನು ಮುಚ್ಚುವುದು ಹಾಗೂ ರಿಟ್ರೆಂಚ್‌ಮೆಂಟುಗಳು ಕಾರ್ಮಿಕರ ವಿರುದ್ಧ ಬಂಡವಾಳಶಾಹಿಗಳ ಸಶಕ್ತ ಅಸ್ತ್ರಗಳಾಗಿ ಬಳಕೆಗೊಳ್ಳಲಾರಂಭಿಸಿದವು. ಕಾಂಗ್ರೆಸ್ [ಐ] ಸರಕಾರದ ಕೈಗಾರಿಕಾ ಧೋರಣೆಯಲ್ಲಿ 'ರೋಗಗ್ರಸ್ತ' ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಉಂಟಾದ ಬದಲಾವಣೆ ಬಂಡವಾಳಶಾಹಿಗಳಿಗೆ ಮತ್ತಷ್ಟು ನೆರವಾಯಿತು. ಸರಿಪಡಿಸಲು ಸಾಧ್ಯವಾಗದ ಕೈಗಾರಿಕೆಗಳನ್ನು ವಹಿಸಿಕೊಳ್ಳಬಾರದೆಂದು ಕೇಂದ್ರ ಸರಕಾರ ತಳೆದ ಧೋರಣೆಯಿಂದಾಗಿ ಸುಮಾರು ಒಂದು ದಶಕದ ಹಿಂದೆಯೇ ಸರಕಾರ ಆಡಳಿತ ವಹಿಸಿಕೊಂಡಿದ್ದ ಕೈಗಾರಿಕೆಗಳೂ ಡಿನೋಟಿಫೈ ಗೊಳ್ಳುವುದರ ಮೂಲಕ ಸಾವಿರಾರು ಕಾರ್ಮಿಕರು ಬೀದಿಗೆಸೆಯಲ್ಪಟ್ಟರು. ಇಂತಹ ಕಾರ್ಮಿಕರಿಗೆ ಬೇರೆ ನೆಲೆ ಆಗುವವರೆಗಾದರೂ ನಿರುದ್ಯೋಗ ಪರಿಹಾರ ನೀಡಬೇಕೆಂಬ ಬೇಡಿಕೆಯನ್ನು ನಿರಾಕರಿಸಿದ ಸರಕಾರ ಅವರನ್ನು ಉಪವಾಸ ಕೆಡವಿದೆ.

ಬಟ್ಟೆ ಕೈಗಾರಿಕೆಯಲ್ಲಿ ಈ ಪರಿಸ್ಥಿತಿ ಅತ್ಯಂತ ತೀವ್ರವಾಗಿದೆ. ಸರಕಾರದ ಪ್ರಕಾರವೇ ಸುಮಾರು 1 ಲಕ್ಷ 10 ಸಾವಿರ ಗಿರಣಿ ಕಾರ್ಮಿಕರು ವಿವಿಧ ಗಿರಣಿಗಳು ಮುಚ್ಚಲ್ಪಟ್ಟ ಕಾರಣ ಕೆಲಸ ಕಳಕೊಂಡಿದ್ದಾರೆ. ಅತ್ತ ಸರಕಾರದ ಈ ಧೋರಣೆ ಗುತ್ತೇದಾರಿ ಬಂಡವಾಳಶಾಹಿಗಳಿಗೆ ವರಪ್ರಸಾದದಂತಾಗಿದೆ. 20 ಪ್ರಮುಖ ಬಂಡವಾಳ ಶಾಹೀ ಮನೆತನಗಳ ವರಮಾನ ನಾಲ್ಕೇ ವರ್ಷಗಳಲ್ಲಿ ದ್ವಿಗುಣಗೊಂಡಿತು. ಸೂಪರ್ ಲಾಭ ಸೂರೆ ಮಾಡಲು ಬಂಡವಾಳವನ್ನು ಬೇರೆಡೆಗೆ ತಿರುಗಿಸಿ ಕೈಗಾರಿಕೆಗಳನ್ನು ರೋಗಗ್ರಸ್ತಗೊಳಿಸಿ ಮುಚ್ಚುವ ಸ್ಥಿತಿಗೆ ತಂದು ನಿಲ್ಲಿಸುವ ಅಪರಾಧಿಗಳು ಈ ಗುತ್ತೇದಾರಿ ಬಂಡವಾಳ ಶಾಹಿಗಳೇ. ಆದರೂ ಅವರಿಗೆ ಸಾರ್ವಜನಿಕ ಹಣಕಾಸು ಸಂಸ್ಥೆಗಳಿಂದ ಒದಗುವ ಆರ್ಥಿಕ ನೆರವಿಗೆ ಇದರಿಂದ ಎಳ್ಳಷ್ಟೂ ಧಕ್ಕೆ ಬರಲಿಲ್ಲ. ಕೇಂದ್ರ ಸರಕಾರದ ಧೋರಣೆಗಳಿಂದಾಗಿ ಈ ಸಂಸ್ಥೆಗಳ ಆರ್ಥಿಕ ನೆರವಿನ ಸಿಂಹಪಾಲು ಈ ಗುತ್ತೇದಾರಿಗಳಿಗೇ ಹೋಗುತ್ತದೆ. ಇದಕ್ಕೆ ಕಾನಪುರದಲ್ಲಿರುವ ಸಿಂಘಾನಿಯಾ ಗುಂಪಿನ ಜೆ. ಕೆ. ರೇವನ್ಸ್ ಒಂದು ಉದಾಹರಣೆ. ಈ ಕಾರ್ಖಾನೆಯನ್ನು ರೋಗಗ್ರಸ್ತಗೊಳಿಸಿ, ಕೊನೆಗೆ 1983 ರ ಮೇನಲ್ಲಿ ಮುಚ್ಚಿ 2000 ಕಾರ್ಮಿಕರನ್ನು ಬೀದಿ ಪಾಲು ಮಾಡಲು ಆಡಳಿತ ವರ್ಗದ ಆರ್ಥಿಕ ದುರ್ವ್ಯವಹಾರಗಳೇ ಕಾರಣ ಎಂದು ಸಿದ್ಧವಾದರೂ ಕೂಡಾ ಸಿಂಘಾನಿಯಾ ಗುಂಪನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಲು ಕೇಂದ್ರ ಸರಕಾರ ನಿರಾಕರಿಸಿತು. ಅಷ್ಟೇ ಅಲ್ಲ ರಿಟ್ರೆಂಚ್‌ಮೆಂಟ್ ವಿರುದ್ಧ ಕಾರ್ಮಿಕರ ಆರು ತಿಂಗಳ ಹೋರಾಟವನ್ನು ದಮನ ಮಾಡಲು ಜೆ. ಕೆ. ಸಿಂಥೆಟಿಕ್ಸ್‌ನ ಆಡಳಿತ ವರ್ಗಕ್ಕೆ ಪೋಲೀಸ್ ನೆರವು ಕೂಡಾ ಒದಗಿಸಲಾಯಿತು!

## ನಿರುದ್ಯೋಗದಲ್ಲಿ ನೆಗೆತ

ಆರ್ಥಿಕ ವ್ಯವಸ್ಥೆಯ ಬಿಕ್ಕಟ್ಟಿನಿಂದಾಗಿ ಉದ್ಯೋಗಾವಕಾಶಗಳ ವೃದ್ಧಿಯಲ್ಲೂ ತೀವ್ರ ಕುಸಿಲು ನಡೆ ಕಾಣಬರುತ್ತದೆ. ಅಂಕೆ—ಸಂಖ್ಯೆಗಳ ಪ್ರಕಾರ ಹೊಸದಾಗಿ ಉದ್ಯೋಗ ಮಾರುಕಟ್ಟೆ ಪ್ರವೇಶಿಸುವವರಲ್ಲಿ ಕೇವಲ 10 ರಿಂದ 15 ಶೇಕಡಾ ಜನರಿಗೆ ಮಾತ್ರ ಉದ್ಯೋಗ ದೊರೆಯುತ್ತಿದೆ. ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಯೂ ಇಷ್ಟೇ ತೀವ್ರವಾಗಿದೆ. ವಾಸ್ತವವಾಗಿ ಕೇಂದ್ರ ಸರ್ಕಾರ ಬಹುರಾಷ್ಟ್ರೀಯ ಹಾಗೂ ಗುತ್ತೇದಾರಿ ಸಂಸ್ಥೆಗಳಿಗೆ ಆಧುನೀಕರಣದ ಹೆಸರಲ್ಲಿ ಯಾಂತ್ರೀಕರಣ ಹಾಗೂ ಗಣಕೀಕರಣಕ್ಕೆ ಅವಕಾಶ ಕೊಟ್ಟು ನಿರುದ್ಯೋಗ ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತಿದೆ.

ತಂಬಾಕು, ತೆಂಗಿನನಾರು, ಬೆಂಕಿಕಡ್ಡಿ ಮುಂತಾದ ಸಾಂಪ್ರದಾಯಿಕ ಕೈಗಾರಿಕೆಗಳಲ್ಲಿ ಯಾಂತ್ರೀಕರಣದ ಮೂಲಕ ಸಾವಿರಾರು ಕಾರ್ಮಿಕರನ್ನು ಉದ್ಯೋಗ ಕಳಕೊಳ್ಳುವಂತಾದರೆ ಬ್ಯಾಂಕು, ರೈಲ್ವೇ ಮುಂತಾದ ಕ್ಷೇತ್ರಗಳಲ್ಲಿ ಕಂಪ್ಯೂಟರ್‌ಗಳ ವ್ಯಾಪಕ ಬಳಕೆಯ ಮೂಲಕ ಲಕ್ಷಗಟ್ಟಲೆ ಉದ್ಯೋಗಾವಕಾಶಗಳನ್ನು ಕಡಿತಗೊಳಿಸಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನಿರುದ್ಯೋಗಿಗಳ ಸಂಖ್ಯೆ ಕಾಂಗ್ರೆಸ್ (ಐ) ಸರ್ಕಾರದ ಈ ಐದು ವರ್ಷಗಳಲ್ಲಿ ಒಂದೂವರೆ ಪಟ್ಟಿಗಿಂತಲೂ ಜಾಸ್ತಿ ನೆಗೆತ ಕಂಡಿದ್ದರೆ ಅದರಲ್ಲಿ ಆಶ್ಚರ್ಯವೇನಿದೆ?

ಕೇಂದ್ರ ಸರ್ಕಾರ ಉದ್ಯೋಗದ ಹಕ್ಕನ್ನು ನ್ಯಾಯ ಕೇಳಬಹುದಾದ ಮೂಲಭೂತ ಹಕ್ಕು ಎಂದು ಪರಿಗಣಿಸಬೇಕೆನ್ನುವ ಅಂತರ್‌ರಾಷ್ಟ್ರೀಯ ಶ್ರಮ ಸಂಘಟನೆ (ILO) ಯ ನಿರ್ಣಯವನ್ನು ಜ್ಯಾರಿಗೊಳಿಸಲು ನಿರಾಕರಿಸುತ್ತಿದೆ. ಅರವತ್ತು ವರ್ಷಗಳ ಹಿಂದೆ ಆಗಿನ ಬ್ರಿಟೀಶ್ ಸರ್ಕಾರಕ್ಕೆ ನೀಡಿದ್ದ ವಿಶೇಷ ಅವಕಾಶದ ಅಂಶವನ್ನು ಮುಂದೆಮಾಡಿ ಈಗಿನ ಸ್ವತಂತ್ರ ಭಾರತದ ಸರ್ಕಾರ ವಾರಕ್ಕೆ 48 ಗಂಟೆ ಕೆಲಸ ಕುರಿತಾದ I. L. O. ದ ನಿರ್ಣಯವನ್ನು ಜ್ಯಾರಿ ಮಾಡಲು ನಿರಾಕರಿಸುತ್ತಿದೆ! ಇದನ್ನು ಜ್ಯಾರಿಮಾಡಿದರೆ ಸಾವಿರಾರು ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸ ಬಹುದು. ವಾರಕ್ಕೆ 40 ಗಂಟೆ ಕೆಲಸವೆಂಬ I. L. O. ದ ಇನ್ನೊಂದು ನಿರ್ಣಯವನ್ನು ಅಂಗೀಕರಿಸಿ ಜ್ಯಾರಿಗೊಳಿಸಿದರೆ ಇನ್ನೂ ಹೆಚ್ಚು ಉದ್ಯೋಗಾವಕಾಶ ನಿರ್ಮಿಸಬಹುದು ಎಂಬ ಅಂಶವನ್ನು ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ವಿಚಾರ ಸಂಕಿರಣವೊಂದು ಸಿ. ಐ. ಟಿ. ಯು. ಪ್ರಯತ್ನದಿಂದಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಆದರೆ ಈ ಬೇಡಿಕೆಗಳನ್ನು ನಿರಾಕರಿಸುವ ಮೂಲಕ ಕಾಂಗ್ರೆಸ್ [ಐ] ಕೇಂದ್ರ ಸರ್ಕಾರ

**'ಪೀಪಲ್ಸ್ ಡೆಮಾಕ್ರಸಿ' ಯಲ್ಲಿ ಪ್ರಕಟವಾದ ಕಾ. ನೃಸಿಂಗ ಚಕ್ರವರ್ತಿಯವರ ಲೇಖನದ ಸಂಗ್ರಹಾನುವಾದ**

ಗುತ್ತೇದಾರಿಗಳು ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳ ತಿಜೋರಿ ತುಂಬುತ್ತಿದೆ.

## ಭ್ರಷ್ಟಾಚಾರ ಮತ್ತು ಬೆಲೆ ಏರಿಕೆ

ಗುತ್ತೇದಾರಿಗಳಿಗೆ, ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಹೀಗೆ ರಿಯಾಯ್ತಿಗಳನ್ನು ತೋರುವ ತನ್ನ ಧೋರಣೆಯಿಂದಾಗಿ ಕೇಂದ್ರ ಸರ್ಕಾರ ಕೈಗಾರಿಕಾ ಕ್ಷೇತ್ರದಲ್ಲಿ ಭ್ರಷ್ಟಾಚಾರ ಹೆಚ್ಚಲು ನೆರವು ನೀಡುತ್ತಿದೆ. ಹಿಂದೂಸ್ತಾನ್ ಫೋಟೋ ಫಿಲಂಸ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ಇತ್ಯಾದಿಗಳಲ್ಲಿ ಅತ್ಯುಚ್ಚ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗಿದ್ದ ಘಟನೆಗಳು ಈಗಾಗಲೇ ಬೆಳಕಿಗೆ ಬಂದಿವೆ.

1980 ರಲ್ಲಿ ಕಾಂಗ್ರೆಸ್ [ಐ] ಬೆಲೆಯೇರಿಕೆಯನ್ನು ತಡೆಹಿಡಿಯುತ್ತೇನೆಂಬ ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದಿತು. ಆದರೆ ಅದರ ಧೋರಣೆಗಳ ಫಲಿತಾಂಶ ತದ್ವಿರುದ್ಧವಾಗಿದೆ. ಕಾಂಗ್ರೆಸ್ [ಐ] ನ ಇತ್ತೀಚಿನ ಆಳ್ವಿಕೆಯ ನಾಲ್ಕುವರೆ ವರ್ಷಗಳಲ್ಲಿ ಅಂಕೆ—ಸಂಖ್ಯೆಯ ಪ್ರಕಾರ ಬಳಕೆದಾರರ ಬೆಲೆ ಸೂಚ್ಯಂಕ 71 ಶೇಕಡಾದಷ್ಟು ಹೆಚ್ಚಿದೆ. ಸಗಟು ವ್ಯಾಪಾರವನ್ನು ರಾಷ್ಟ್ರೀಕರಿಸಿ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೂ ಬಲಗೊಳಿಸಿ ಬೆಲೆಗಳನ್ನು ಹತೋಟಿಗೆ ತರಬೇಕೆಂದು

ಕಾರ್ಮಿಕ ವರ್ಗದ ಬೇಡಿಕೆಗಳನ್ನು ಸರಕಾರ ಗಮನಿಸುತ್ತಲೇ ಇಲ್ಲ ಬದಲಾಗಿ ಅವರ ಹೋರಾಟಗಳನ್ನು ದಮನ ಮಾಡುತ್ತಿದೆ.

## ತೀವ್ರ ದಬ್ಬಾಳಿಕೆಯ ಅವಧಿ

ಕಳೆದ ಐದು ವರ್ಷಗಳಾದ್ಯಂತ ಕಾಂಗ್ರೆಸ್ [ಐ] ಕೇಂದ್ರ ಸರ್ಕಾರ ಕಾರ್ಮಿಕ ವಿರೋಧೀ ನೀತಿಗಳ ವಿರುದ್ಧ ಹೋರಾಡುತ್ತಿರುವ ಕಾರ್ಮಿಕರ ಮೇಲೆ ಸತತ ದಬ್ಬಾಳಿಕೆ ನಡೆಸುತ್ತಾ ಬಂದಿದೆ. ಈ ಅವಧಿಯ ವಿಶಿಷ್ಟ ಲಕ್ಷಣವೆಂದರೆ ಆಡಳಿತವರ್ಗದ ಬಾಡಿಗೆ ಗೂಂಡಾಗಳು ಕೆಲವೊಮ್ಮೆ ಪೋಲೀಸರ ಜತೆಗೂಡಿ, ಕೆಲವೊಮ್ಮೆ ಇಂಟಕ್ ನವರ ಜತೆಗೂಡಿ ನಡೆಸಿದ ಆಕ್ರಮಣಗಳು, ಅತ್ಯಾಚಾರ, ಲೂಟಿ, ಬಲಾತ್ಕಾರದಿಂದ ಯೂನಿಯನ್‌ಗಳನ್ನು ಕಬಳಿಸುವುದು ಇತ್ಯಾದಿ ವಿಪರೀತವಾಗಿ ಹೆಚ್ಚಿದವು. ಈ ಸಂದರ್ಭದಲ್ಲೆಲ್ಲಾ ಕಾಂಗ್ರೆಸ್ [ಐ] ಸರ್ಕಾರಗಳು ಒಂದೋ ಮೂಕ ಪ್ರೇಕ್ಷಕರಾಗಿದ್ದವು ಅಥವಾ ತಮ್ಮ ದಮನ ಶಕ್ತಿಯನ್ನು ಮಾಲಕರಿಗೆ, ಗುತ್ತೇದಾರಿ ಬಂಡವಾಳಶಾಹಿಗಳಿಗೆ ಬೆಂಬಲವಾಗಿ ಬಳಸಿದವು. ರಿಟ್ರೆಂಚ್‌ಮೆಂಟ್ ವಿರುದ್ಧ ಹೋರಾಟ ನಡೆಸುತ್ತಿರುವ ಕಾಂಟ್ರಾಕ್ಟ್ ಕಾರ್ಮಿಕರ ಮೇಲೆ ಪೋಲೀಸರ ಲಾಠಿ ಪ್ರಹಾರ ನಡೆದವು. ಇದರಿಂದಾಗಿ ಜಮ್‌ಶೆಡ್‌ಪುರ ಟಿಸ್ಕೋದ ಪ್ರಸಿದ್ಧ ಕಾರ್ಮಿಕ ಮುಂದಾಳು ಸಾವನ್ನಪ್ಪಬೇಕಾಯಿತು. ಬಿಲ್ಹಾನ ಸಿಂಪ್ಲೆಕ್ಸ್ ಲಿಮಿಟೆಡ್‌ನ ಕಾರ್ಮಿಕ ಮುಖಂಡರನ್ನು ಅನ್ಯಾಯವಾಗಿ ಬಂಧಿಸಿಡಲಾಯ್ತು. ಮಹಿಳಾ ಕಾರ್ಮಿಕರ ಮೇಲೂ ಅಮಾನುಷ ಲಾಠೀ ಪ್ರಹಾರಗಳು ನಡೆದವು. 1982 ರ ಜನವರಿ 19 ಸಾರ್ವತ್ರಿಕ ಮುಷ್ಕರದ ನಂತರ ಸಾವಿರಾರು ಕಾರ್ಮಿಕರನ್ನು ವಜಾ ಮಾಡಲಾಯಿತು.

1947 ಮತ್ತು 1948 ರಲ್ಲಿ ಐ.ಎಲ್.ಓ. ದ 'ಸಂಘಟನೆಯ ಸ್ವಾತಂತ್ರ್ಯ' ಮತ್ತು 'ಸಾಮೂಹಿಕ ಚೌಕಾಸಿಯ ಹಕ್ಕು' ಕುರಿತಾದ ನಿರ್ಣಯಗಳನ್ನು ಭಾರತದ ಕಾಂಗ್ರೆಸ್ (ಐ) ಸರಕಾರ ಇನ್ನೂ ಅಂಗೀಕರಿಸಿಲ್ಲ.

ಸಂಘಟಿತ ಕೈಗಾರಿಕಾ ಕ್ಷೇತ್ರ ಮಾತ್ರವಲ್ಲ, ಇತರ ಕ್ಷೇತ್ರಗಳ ನೌಕರರೂ ಈ ಸರಕಾರದ ದಬ್ಬಾಳಿಕೆಯನ್ನು ಈ ಐದು ವರ್ಷಗಳಲ್ಲಿ ಎದುರಿಸಬೇಕಾಗಿ ಬಂತು. ರಾಜ್ಯ ಸರಕಾರೀ ನೌಕರರು, ವಿದ್ಯುಚ್ಛಕ್ತಿ ನೌಕರರು, ಶಿಕ್ಷಕರು, ಇ.ಎಸ್.ಐ. ಹಾಗೂ ರೆಸಿಡೆಂಟ ಡಾಕ್ಟರುಗಳು ತಮ್ಮ ದೀರ್ಘ ಹೋರಾಟಗಳ ಅವಧಿಯಲ್ಲಿ ಕಾಂಗ್ರೆಸ್ (ಐ) ಸರಕಾರದ ದಬ್ಬಾಳಿಕೆಯನ್ನು ಎದುರಿಸಬೇಕಾಗಿ ಬಂತು. ಬಿಹಾರದ ಕುಪ್ರಸಿದ್ಧ ಬಿಹಾರ್ ಪತ್ರಿಕಾ ಮಸೂದೆಯನ್ನು ಮಂಡಿಸಿದ್ದೂ ಇದೇ ಅವಧಿಯಲ್ಲಿ. ದೇಶಾದ್ಯಂತ ಇದಕ್ಕೆ ಕಂಡು ಬಂದ ತೀವ್ರ ಪ್ರತಿಭಟನೆ, ಕಾರ್ಮಿಕವರ್ಗ ಈ ಸಂದರ್ಭದಲ್ಲಿ ಪ್ರದರ್ಶಿಸಿದ ಸೌಹಾರ್ದತೆಯಿಂದಾಗಿ ಅಂತಿಮವಾಗಿ ಈ ಮಸೂದೆಯನ್ನು ಬಿಹಾರಿನ ಕಾಂಗ್ರೆಸ್ [ಐ] ಸರಕಾರ ವಾಪಾಸು ಪಡೆಯುವಂತಾಯಿತು.

## ಭಿನ್ನ ಉದಾಹರಣೆ

ಪಶ್ಚಿಮಬಂಗಾಳ ಹಾಗೂ ತ್ರಿಪುರಾದ ಎಡರಂಗ ಸರಕಾರಗಳ ನಿಲುವು ಈ ದೃಷ್ಟಿಯಲ್ಲಿ ತೀರಾ ಭಿನ್ನವಾಗಿತ್ತು. ಅವು ಮೇಲ್ಮಟ್ಟದ ಪ್ರಜಾಪ್ರಭುತ್ವದ ದ್ಯೋತಕಗಳಾಗಿದ್ದವು. ಎನ್. ಎಸ್. ಎ. ಹಾಗೂ ಎಸ್ಮಾಗಳಂತಹ ಕರಾಳ ಶಾಸನಗಳನ್ನು ಬಳಸಲು ಮಾತ್ರವಲ್ಲ ಕಾರ್ಮಿಕ ವಿವಾದಗಳು ಹಾಗೂ ಪ್ರಜಾಪ್ರಭುತ್ವ ಹೋರಾಟಗಳ ವಿರುದ್ಧ ಪೋಲೀಸರನ್ನು ಬಳಸಲು ಅವು ನಿರಾಕರಿಸಿದವು. ಕೈಗಾರಿಕಾ ಕ್ಷೇತ್ರದಲ್ಲಿ ಹಿಂಸಾಚಾರ ಕಂಡು ಬರುತ್ತಿರುವುದು ಕೇವಲ ಆಡಳಿತ ವರ್ಗಗಳು ಹಾಗೂ ಅವುಗಳ ಬಾಡಿಗೆ ಗೂಂಡಾಗಳ ಕೊಲೆಗಡುಕ ಆಕ್ರಮಣಗಳಿಂದಾಗಿಯೇ ಹೊರತು ಕಾರ್ಮಿಕರಿಂದಾಗಿ ಅಲ್ಲ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ಕಾಂಗ್ರೆಸ್ (ಐ) ಕೇಂದ್ರದಲ್ಲಿ ಹಾಗೂ ಅದರ ಆಳ್ವಿಕೆಯ ರಾಜ್ಯಗಳಲ್ಲಿ ಆಗಾಗ ಈ ಪ್ರಶ್ನೆ ಎತ್ತುತ್ತಿದ್ದರೆ ಅದು ವಾಸ್ತವವಾಗಿ ಆಡಳಿತ ವರ್ಗಗಳ ಹಿಂಸಾಚಾರ ಎಂಬುದು ಈಗ ಸುಸ್ಪಷ್ಟ.

ಈ ಎರಡು ಸರಕಾರಗಳು ಹಾಗೂ ಕೇರಳದ ಎಡ-ಪ್ರಜಾಪ್ರಭುತ್ವವಾದೀ ಸರಕಾರ ಕಾರ್ಮಿಕರ ಸಂಘಟನಾತ್ಮಕ ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಬಹಳಷ್ಟು ಬಲಗೊಳಿಸಿವೆ ಮಾತ್ರವಲ್ಲ, ನಿರುದ್ಯೋಗ ಸಮಸ್ಯೆಗೆ ತಕ್ಕಮಟ್ಟಿನ ಪರಿಹಾರ ಹಾಗೂ ಕಾರ್ಮಿಕರಿಗೆ ಪ್ರಯೋಜನಕಾರಿಯಾದ ಹಲವು ಯೋಜನೆಗಳನ್ನು ಜ್ಯಾರಿಗೊಳಿಸಿವೆ.

## ರೈತ–ಕಾರ್ಮಿಕ ಸೌಹಾರ್ದತೆ

ಮೂರು ದಶಕಗಳಿಂದ ಅವ್ಯಾಹತ ಲೂಟಿಗೆ ಒಳಗಾಗಿದ್ದ ರೈತಾಪಿ ವರ್ಗವೂ ಈ ಅವಧಿಯಲ್ಲಿ ಚಳುವಳಿಗಿಳಿಯಿತು. ಅದುವರೆಗೆ ತನ್ನ ಆರ್ಥಿಕ ಬೇಡಿಕೆಗಳತ್ತ ಮಾತ್ರ ಗಮನ ಹರಿಸಿದ್ದ ಕಾರ್ಮಿಕ ವರ್ಗ ಇತರ ಜನವಿಭಾಗಗಳ ಸಮಸ್ಯೆಗಳ ಬಗೆಗೂ ವಿಶೇಷತಃ ರೈತರು ಮತ್ತು ಕೃಷಿ ಕಾರ್ಮಿಕರ ಸಮಸ್ಯೆಗಳ ಬಗೆಗೂ ಕಾಳಜಿ ವಹಿಸಲಾರಂಭಿಸಿತು. 1981 ರ ಮಾರ್ಚ್

(6ನೇ ಪುಟ ನೋಡಿ)

# ಕಾಂಗ್ರೆಸ್ ಪಕ್ಷವನ್ನೂ, ಕೋಮುವಾದಿಗಳನ್ನೂ ಸೋಲಿಸಿ

[2ನೇ ಪುಟದಿಂದ]

8. ಹರಿಜನರ, ಗಿರಿಜನರ ಹಿಂದುಳಿದ ಜಾತಿಗಳ ಮಹಿಳೆಯರ ಮೇಲೆ ದೌರ್ಜನ್ಯವೆಸಗುವವರ ಮೇಲೆ ಕ್ರಮ. ಹಿಂದು ಮತಾಂಧತೆಯ ವಿರುದ್ಧ ಮುಸ್ಲಿಂ ಮತ್ತಿತರ ಧಾರ್ಮಿಕ ಅಲ್ಪ ಸಂಖ್ಯಾತರಿಗೆ ರಕ್ಷಣೆ, ಹಿಂದು, ಮುಸ್ಲಿಂ, ಸಿಖ್, ಕ್ರಿಶ್ಚಿಯನ್, ಮೂಲಭೂತವಾದಿಗಳಿಂದ ಮತೀಯ ಭಾವನೆಗಳ ಪ್ರಸಾರದ ವಿರುದ್ಧ ಕ್ರಮ.

9. ಕೇಂದ್ರ-ರಾಜ್ಯಗಳ ಸಂಬಂಧದ ಪುನರ್ರಚನೆ. ರಾಜ್ಯಗಳಿಗೆ ಹೆಚ್ಚು ಅಧಿಕಾರ.

10. ರಾಷ್ಟ್ರೀಯ ಐಕ್ಯತೆಗಾಗಿ ಛಿದ್ರಕಾರಿ ಶಕ್ತಿಗಳ ವಿರುದ್ಧ ಕಸುವಿನಿಂದ ಹೋರಾಟ.

11. ನೇಪಾಲಿ, ಮೈತಿ, ಭಾಷೆಗಳನ್ನು ಸಂವಿಧಾನದ ಎಂಟನೆಯ ಷೆಡ್ಯೂಲಿಗೆ ಸೇರಿಸುವದು.

12. ಅಲಿಪ್ತ ನೀತಿಯ ಬಲವೃದ್ಧಿ ವಿಶ್ವಶಾಂತಿಗೆ ಸಮರ್ಥ ಬೆಂಬಲ, ಅಣುಯುದ್ಧ ಅಪಾಯದ ವಿರುದ್ಧ ಹೋರಾಟ.

13. ದೇಶದ ರಕ್ಷಣೆಯಲ್ಲಿ ವಿದೇಶಿ ಏಜೆಂಟರ ಮಧ್ಯ ಪ್ರವೇಶದ ಬಗ್ಗೆ ಕಡು ಎಚ್ಚರ. ಕರ್ನಾಟಕದಲ್ಲಿ ವಿದ್ಯುಚ್ಛಕ್ತಿ ಅಭಾವದಿಂದ ಅನೇಕ ಕಾರ್ಖಾನೆಗಳು ತೊಂದರೆಯಲ್ಲಿ ಸಿಕ್ಕಿವೆ, ಮಾತ್ರವಲ್ಲ, ಬೆಂಗಳೂರು ಮತ್ತು ಇತರ ನಗರಗಳಲ್ಲಿ ಕುಡಿಯುವ ನೀರಿನ ಅಭಾವಕ್ಕೆ ಕಾರಣವಾಗಿದೆ, ರೈತರಿಗೆ ತೊಂದರೆಯಾಗಿದೆ. ವಿಜಯ ನಗರದ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗದೆ, ಹೊಸ ಕಾರ್ಖಾನೆಗಳು ಬರದೆ, ನಿರುದ್ಯೋಗ ಸಮಸ್ಯೆ ಉಲ್ಬಣವಾಗಿದೆ. ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಕ್ಷೇಮಾಭಿವೃದ್ಧಿ ಯೋಜನೆಗಳನ್ನು ಕೈ ಗೊ ಳ್ಳ ಲು ಕೇಂದ್ರದ ನೀತಿಯು ಅಡ್ಡ ಬಂದಿದೆ. ಇದರ ವಿರುದ್ಧ ಹೋರಾಟ ಮಾಡಿ ರಾಜ್ಯದ ಹಿತ ರಕ್ಷಣೆ ಮಾಡಲು ಕಾಂಗ್ರೆಸ್ಸಿನ ಲೋಕಸಭಾ ಸದಸ್ಯರು ವಿಫಲಗೊಂಡಿದ್ದಾರೆ. ಜನತಾ ಸರ್ಕಾರದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ಕೇಂದ್ರದಿಂದ ಹೆಚ್ಚಿನ ಸಂಪನ್ಮೂಲ ಸಿಗಬೇಕು. ಕೇಂದ್ರ-ರಾಜ್ಯದ ಇಂದಿನ ಸಂಬಂಧಗಳು ಬದಲಾಗಬೇಕು, ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಸಿಗಬೇಕು ಎಂಬ ಉದ್ದೇಶದಿಂದ ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕರೆದಿದ್ದು ಆ ಬಗ್ಗೆ ಆರ್ಥಿಕ ತಜ್ಞರ ಸಮಾವೇಶವನ್ನು ಕರೆದದ್ದೂ ಕೂಡ ಕಾಂಗ್ರೆಸಿಗರಿಗೆ ಹಿಡಿಸಲಿಲ್ಲ. ಇದನ್ನು ಕೇಂದ್ರ ಸರ್ಕಾರವನ್ನು ಉರುಳಿಸುವ ಕುಟಿಲ ಯತ್ನ ಎಂದು ಹೇಳಿದ್ದನ್ನು ಮರೆಯಬಾರದು. ಕರ್ನಾಟಕ ರಾಜ್ಯದಲ್ಲಿ ಜನತಾ ಸರ್ಕಾರ ರಾಜ್ಯದ ಅಭಿವೃದ್ಧಿಗೋಸ್ಕರ ಹೆಚ್ಚಿನ ಹಣಕ್ಕೆ ಕೇಂದ್ರದೊಡನೆ ಹೋರಾಟ ಮಾಡುತ್ತಿರುವದು ಸ್ವಾಗತಾರ್ಹ.

1983ನೇ ಜನವರಿಯಲ್ಲಿ ಜನತಾ ಪಕ್ಷ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷಗಳೊಡನೆ ಹೊಂದಾಣಿಕೆ ಮಾಡಿಕೊಂಡರು. ಈ ಲೋಕಸಭಾ ಚುನಾವಣೆಯಲ್ಲಿ, ಶ್ರೀನಗರ ಮತ್ತು ಕಲ್ಕತ್ತಾಗಳಲ್ಲಿ ಜರುಗಿದ 17 ವಿರೋಧ ಪಕ್ಷಗಳ ಶೃಂಗ ಸಭೆಯ ತೀರ್ಮಾನವನ್ನು ಕಾರ್ಯರೂಪಕ್ಕೆ ತರಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಚುನಾವಣೆ ಹೊಂದಾಣಿಕೆ ಅಗತ್ಯವಾಗಿದ್ದರೂ ಜನತಾ ಪಕ್ಷ, ಸಂಕುಚಿತ ಮತ್ತು ಸ್ವಾರ್ಥ ದೃಷ್ಟಿಯಿಂದ ಚುನಾವಣೆಯನ್ನು ಭಾರತೀಯ ಜನತಾ ಪಕ್ಷದೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಕಾತರಿಸಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಉತ್ಸುಕತೆ ತೋರಿಸಲಿಲ್ಲ. ಇದು ವಿಷಾದಕರ. ಆದರೂ ಸಹ ಕರ್ನಾಟಕದ ಜನತೆ ಜನತಾ ಸರ್ಕಾರ, ಚುನಾವಣೆ ನಡೆದ ಮೇಲೂ ಅಧಿಕಾರದಲ್ಲಿ ಮುಂದುವರಿಯುವ ಹಾಗೆ ಮಾಡಬೇಕಾದರೆ ಕಾಂಗ್ರೆಸ್ ಪಕ್ಷವನ್ನು ಸೋಲಿಸಲೇಬೇಕು. ಆದರೊಂದಿಗೆ ಅಲ್ಪ ಸಂಖ್ಯಾತರ ಮಧ್ಯದಲ್ಲಿ ನಂಬಿಕೆ, ಭರವಸೆ ಬರುವಂತೆ ಮಾಡಲು ಭಾರತೀಯ ಜನತಾ ಪಕ್ಷವನ್ನು ಸಹ ಸೋಲಿಸಲೇ ಬೇಕು. ಇದನ್ನು ಕರ್ನಾಟಕದ ಎಚ್ಚೆತ್ತ ಜನತೆ ಮಾಡುತ್ತಾರೆ ಎಂಬ ನಂಬಿಕೆ, ವಿಶ್ವಾಸ ಕಮ್ಯುನಿಸ್ಟ್ ಪಕ್ಷಕ್ಕೆ ಇದೆ.

ಮೊದಲನೆಯ ಬಾರಿಗೆ ಕರ್ನಾಟಕದಲ್ಲಿ 1983 ನೇ ಚುನಾವಣೆಯಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬಂದಿತು. ಈ 23 ತಿಂಗಳ ಅನುಭವ ಜನತಾ ಪಕ್ಷದ ಸರಕಾರದ ಬಗ್ಗೆ ಪೂರ್ಣವಾದ ಸಮಾಧಾನ ಕಾರ್ಮಿಕರಲ್ಲೂ, ರೈತರಲ್ಲೂ, ಮಧ್ಯಮ ವರ್ಗದ ಜನರಲ್ಲೂ ಇಲ್ಲದಿದ್ದರೂ ಕಾಂಗ್ರೆಸ್ ಸರಕಾರಕ್ಕಿಂತ ಜನತಾ ಸರ್ಕಾರವೇ ಮೇಲೂ ಎಂಬ ಅಭಿಪ್ರಾಯ ಜನಜನಿತವಾಗಿದೆ. ಆದ್ದರಿಂದ ಕರ್ನಾಟಕದ ಜನತೆ ರಾಷ್ಟ್ರವನ್ನು ರಕ್ಷಿಸಲು ಅಸಮರ್ಥವಾಗಿರುವ ಕಾಂಗ್ರೆಸ್ ಅನ್ನು, ಕೋಮುವಾದಿ, ಭಾರತೀಯ ಜನತಾ ಪಕ್ಷವನ್ನು ಚುನಾವಣೆಯಲ್ಲಿ ಸೋಲಿಸಿ ಉಡುಪಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ, ಶ್ರೀ ಕೆ.ಆರ್. ಶ್ರೀಯಾನ್ ಉಳಿದೆಡೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಮತ ನೀಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕಳಕಳೀಯ ಮನವಿ ಮಾಡುತ್ತದೆ. ○

# ಕಾಂಗ್ರೆಸ್ (ಐ) ಸರಕಾರ ಹಾಗೂ ಕಾರ್ಮಿಕ ವರ್ಗ

[5ನೇ ಪುಟದಿಂದ]

26 ರ ಕಿಸಾನ್ ರ್‍ಯಾಲಿ ಚಾರಿತ್ರಿಕವಾಗಿತ್ತು. ಅದೇ ವರ್ಷ ಜೂನ್ 4 ರಂದು ಮೂಡಿ ಬಂದ ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಲನ ಸಮಿತಿ ರೈತರ ಕೃಷಿ ಕಾರ್ಮಿಕರ ಬೇಡಿಕೆಗಳಿಗೂ ದನಿ ನೀಡಿತು. ಮಹಾರಾಷ್ಟ್ರ ಕರ್ನಾಟಕ ರೈತ ಹೋರಾಟಗಳಲ್ಲೂ ಕಾರ್ಮಿಕ ವರ್ಗ ತನ್ನ ಸೌಹಾರ್ದತೆ ಪ್ರದರ್ಶಿಸಿತು.

ಎನ್. ಸಿ. ಸಿ. ಯ ಉದಯದ ನಂತರ ಐಕ್ಯ ಹೋರಾಟಗಳು ಹೆಚ್ಚಲಾರಂಭಿಸಿದವು. 1982 ರ ಜನವರಿ 19 ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿ ನಡೆಯಿತು ಕಾಂಗ್ರೆಸ್ (ಐ) ಸರಕಾರಗಳು ಐವತ್ತು ಸಾವಿರಕ್ಕೂ ಹೆಚ್ಚು ಕಾರ್ಮಿಕರನ್ನು ಬಂಧಿಸಿದವು. ಕೆಲಸದಿಂದ ವಜಾ, ಎಂಟು ದಿನಗಳ ವೇತನ ಕಡಿತ ಇತ್ಯಾದಿ ಹಲವು ರೀತಿಯ ದಮನ ಕ್ರಮಗಳನ್ನು ಕಾರ್ಮಿಕರು ಎದುರಿಸಬೇಕಾಗಿ ಬಂತು. ನಂತರ ಬಂದರು ಕಟ್ಟೆ ಹಾಗೂ ಸೆಣಬು ಕೈಗಾರಿಕೆಗಳಲ್ಲಿ ಅಭೂತಪೂರ್ವ ಐಕ್ಯ ಹೋರಾಟಗಳು ನಡೆದವು.

ಆದರೂ ಈ ಐಕ್ಯ ಹೋರಾಟಗಳಿಗೆ ವಿಚ್ಛಿದ್ರಕಾರೀ ಶಕ್ತಿಗಳ ಬೆಳವಣಿಗೆಯನ್ನು ತಡೆಯುವುದು ಸಾಧ್ಯವಾಗಿಲ್ಲ, ಪಂಜಾಬ್ ಮತ್ತು ಅಸ್ಸಾಂನಲ್ಲಿ ಪ್ರತ್ಯೇಕತಾವಾದೀ ಶಕ್ತಿಗಳ ಸವಾಲನ್ನು ಎದುರಿಸುವುದು ಇನ್ನೂ ಸಾಧ್ಯವಾಗಿಲ್ಲ, ಹಿಂದೂ ಹಾಗೂ ಮುಸ್ಲಿಂ ಇವೆರಡೂ ಕೋಮುಗಳ ಕೋಮುವಾದಿಗಳು ನಡೆಸುವ ಗಲಭೆಗಳನ್ನು ತಡೆಯುವುದು ಸಾಧ್ಯವಾಗಿಲ್ಲ. ಇದರಿಂದಾಗಿಯೇ ಇಂದಿರಾಗಾಂಧಿಯ ಕೊಲೆಯ ನಂತರದ ಸಾಮೂಹಿಕ ಹತ್ಯಾಕಾಂಡವನ್ನು ಎದುರಿಸುವುದು ಅಥವಾ ತಡೆಹಿಡಿಯುವುದು ಕಾರ್ಮಿಕ ವರ್ಗಕ್ಕೆ ಸಾಧ್ಯವಾಗಿಲ್ಲ.

## ಕಾರ್ಮಿಕರು ಮರೆಯಬಾರದು

ಕಳೆದ ಐದು ವರ್ಷಗಳ ಈ ಘಟನೆಗಳನ್ನು ಕಾರ್ಮಿಕ ವರ್ಗ ಮರೆಯುವುದು ಸಾಧ್ಯವಿಲ್ಲ. ಯಾಕೆಂದರೆ ಕಾಂಗ್ರೆಸ್ [ಐ] ಏನೇ ಆಶ್ವಾಸನೆ ಕೊಟ್ಟರೂ ಅವನ್ನು ಈಡೇರಿಸುವ ಸಾಮರ್ಥ್ಯ ಅದಕ್ಕಿಲ್ಲ ಎಂಬುದಕ್ಕೆ ಸಾಕ್ಷಿ ಅವು. ದಲಿತರ ಉದ್ಧಾರವಾಗಲೀ, ರಾಷ್ಟ್ರೀಯ ಸಮಗ್ರತೆಯ ರಕ್ಷಣೆಯಾಗಲೀ, ವಿವಿಧ ಜನ ವಿಭಾಗಗಳ ನಡುವೆ ಸಾಮರಸ್ಯ ಸಾಧಿಸುವುದಾಗಲೀ ಅದಕ್ಕೆ ಸಾಧ್ಯವಿಲ್ಲ. ಯಾಕೆಂದರೆ ಈ ವಿಚ್ಛಿದ್ರಕಾರೀ ಶಕ್ತಿಗಳನ್ನು ಅದು ತನ್ನ ಸ್ವಂತ ಲಾಭಕ್ಕಾಗಿ, ಚುನಾವಣಾ ಪ್ರಯೋಜನ ಪಡೆಯಲು ಉಪಯೋಗಿಸುತ್ತಾ ಬಂದಿದೆ—ಉದಾ : ಕೇರಳ ಮತ್ತು ತ್ರಿಪುರಾದಲ್ಲಿ. ಈ ವಿಷಯದಲ್ಲಿಯೂ ಪ. ಬಂಗಾಳ ಹಾಗೂ ತ್ರಿಪುರಾದ ಎಡರಂಗ ಸರ್ಕಾರಗಳ ದಾಖಲೆ ತೀರಾ ಭಿನ್ನವಾದದ್ದು. ರಾಷ್ಟ್ರೀಯ ಸಮಗ್ರತೆಯನ್ನು ಕಾಪಾಡುವುದು, ಜತೆಗೆ ಎಲ್ಲಾ ಜನ ವಿಭಾಗಗಳ ಮುನ್ನಡೆಗೆ ಅವಕಾಶ ಕಲ್ಪಿಸಿ ಕೊಡುವುದು ಕೇವಲ ಎಡ, ಪ್ರಜಾ ಪ್ರಭುತ್ವವಾದೀ ಹಾಗೂ ಜಾತ್ಯಾತೀತ ಶತ್ತಿಗಳಿಗೆ ಮಾತ್ರ ಸಾಧ್ಯ.

ವಿವಿಧ ವೇಶಗಳ ಕೋಮುವಾದಿಗಳನ್ನೂ ಕಾರ್ಮಿಕವರ್ಗ ಮರೆಯಲು ಸಾಧ್ಯವಿಲ್ಲ. ಕೋಮುಗಳ ನಡುವಿನ ಸಾಮರಸ್ಯ ಮುರಿಯುವುದೇ ಇವರ ಪ್ರಮುಖ ಗುರಿ. ಇವರು ಕಾರ್ಮಿಕ ವರ್ಗದ ಐಕ್ಯತೆಯನ್ನು ವಿಚ್ಛಿದ್ರಗೊಳಿಸುತ್ತಾರೆ. ಆದ್ದರಿಂದಾಗಿ ಈಗ ಕಾರ್ಮಿಕ ವರ್ಗದ ಕರ್ತವ್ಯ ಬಹಳ ಸ್ಪಷ್ಟ. ಅದು ಕಾಂಗ್ರೆಸ್ [ಐ] ನ್ನು ಸೋಲಿಸಿ ಎಡ, ಪ್ರಜಾಪ್ರಭುತ್ವವಾದೀ, ಜಾತ್ಯಾತೀತ ಶಕ್ತಿಗಳನ್ನು ಈ ಚುನಾವಣೆಗಳಲ್ಲಿ ಆರಿಸಬೇಕು. ಕೋಮುವಾದಿಗಳು ಹಾಗೂ ಇತರ ವಿಚ್ಛಿದ್ರಕಾರಿ ಶಕ್ತಿಗಳನ್ನು ಅದು ನಿರಾಕರಿಸಬೇಕು.

ಶಕ್ತಿಶಾಲೀ ಎಡಪಂಥವನ್ನು ಹೊಂದಿರುವ ಒಂದು ಸಂಸತ್ತು, ದೇಶವನ್ನು ಛಿದ್ರಗೊಳಿಸಬೇಕೆಂಬ ಸಾಮ್ರಾಜ್ಯಶಾಹಿಗಳ ಕುತಂತ್ರಗಳ ವಿರುದ್ಧ ಹೋರಾಡಬಲ್ಲ, ಪ್ರಜಾಪ್ರಭುತ್ವ ಮತ್ತು ಕಾರ್ಮಿಕ ಸಂಘಟನೆಯ ಹಕ್ಕುಗಳ ಬೆಳವಣಿಗೆಯಲ್ಲಿ ನಂಬಿಕೆಯಿರುವ, ಗುತ್ತೇದಾರಿಗಳ ಬಹು ರಾಷ್ಟ್ರೀಯ ಸಂಸ್ಥೆಗಳ ಹಾಗೂ ಭೂಮಾಲಕರ ಶೋಷಣೆಯನ್ನು ವಿರೋಧಿಸುವ ವ್ಯಕ್ತಿಗಳಿರುವ ಒಂದು ಸಂಸತ್ತು ಮಾತ್ರ ದೇಶವನ್ನು ಈಗಿನ ಅರ್ಥಿಕ ಕೊಚ್ಚೆಯಿಂದ ಮೇಲಕ್ಕೆತ್ತಬಲ್ಲದು.

## ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಶಿಬಿರ

ನವಂಬರ್ ತಾರಿಖು 17 ಮತ್ತು 18 ರಂದು ಬಾಗೇಪಲ್ಲಿ ತಾಲ್ಲೂಕ್ ಕೊಲ್ಲಂ ಪಲ್ಲಿಯಲ್ಲಿ ಜಿಲ್ಲಾ ಮಟ್ಟದ ಅಧ್ಯಯನ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರಕ್ಕೆ ರಾಜ್ಯ ನಾಯಕರಾದ ಕಾ. ಎಸ್. ಆರ್. ಆರಾಧ್ಯ ಅವರು ಮತ್ತು ಕಾ. ಎಸ್. ಶಿವರಾಂ ಮತ್ತು ಜಿ.ವಿ. ಶ್ರೀರಾಮ ರೆಡ್ಡಿಯವರು ಭಾಗವಹಿಸಿದ್ದರು. ಇವರುಗಳು ಈ ಸಭೆಯಲ್ಲಿ ವೈಜ್ಞಾನಿಕ ಸಮಾಜವಾದ ಮತ್ತು ವಿದ್ಯಾರ್ಥಿ ಯುವ ಜನರ ಇಂದಿನ ರಾಜಕೀಯ ಪರಿಸ್ಥಿತಿ ಮತ್ತು ಚರಿತ್ರೆಯ ಅರ್ಥಶಾಸ್ತ್ರ ಮತ್ತು ಐತಿಹಾಸ ಇನ್ನೂ ಮುಂತಾದ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

## ಎ. ಕೆ. ಜಿ. ಭವನದ ನಿಧಿಗೆ ಸಹಾಯ

[ನವಂಬರ್ 25 ರ ಸಂಚಿಕೆಯಿಂದ ಮುಂದುವರೆದುದು]

ಗಣಪಯ್ಯ ಪೂಜಾರಿ 5 ಗೋಪಾಲ ಮೆಂಡನ್ 5 ಕೆ. ಕೇಶವ 5 ಎನ್. ರಾಜೀವ 5 ಕೆ. ಬಾಬು 5 ಯು. ಮಹಾಬಲ 5 ಯು. ಮಂಜು 5 ಜಿ. ಬಾಚಾ 5 ಮಣಿ 5 ಬಿ. ಗೋಪಾಲ 5 ಬಿ. ಶಿವ 5 ಕೆ. ಸುಕ್ರ 5 ಕೆ. ವೆಂಕಟ 5 ಗೋಪು 5 ಸೋಮ 5 ಸುಬ್ರಾಯ 5 ಗೋವಿಂದ 5 ಜಿ. ಬಸವ 5 ಫಿಲಿಪ್ 5 ಎಂ. ಬಾಚಾ 5 ಕರಿಯ 5 ರಾರ್ಬಟ್ 5 ಸಂಜೀವ 5 ಭೋಜ ಸಪಲ್ಯ 5 ಹೆಚ್. ಮಂಜ 5 ಕೆ. ನರಸಿಂಹ 5 ಬಿ. ನಾರಾಯಣ 5 ಶೀನ ದೇವಾಡಿಗ 5 ಜಿ. ಮಂಜ 5 ಪುಟ್ಟ 5 ಕಲಾ 5 ಕೂಸಾ 5 ಸಂಜು 5 ರಾಜು ಪೂಜಾರಿ 5 ಜಿ. ಗೋವಿಂದ 5 ಜಿ. ಬಾಬು ಶೇರಿಗಾರಾ 5 ಕೆ. ಚೆನ್ನ 5 ಎಸ್ ಬಸವ 5 ಹೆಚ್. ನರಸಿಂಹ 5 ಜಿ. ಬಸವ 5 ಐಸಂತಿ 5 ಅಣ್ಣು ಪೂಜಾರಿ 5 ಮಹಾಬಲ ದೇವಾಡಿಗ 5 ಬಿ. ಶೀನ ಪೂಜಾರಿ 5 ಶೀನ ಸೌಕರ್ 5 ಮೆರ್ದಿ ಶಂಕರ 5 ಬಿ. ಮಂಜ 5 ಬಿ. ಬಡಿಯ 5 ಬಸವರಾಜ 5 ಕುದ್ರು ನಾರಾಯಣ 5 ರಾಮ ಮಗೇರಾ 5 ಕೆ. ನಾಣು 5 ಹೆಚ್. ಶೀನ 5 ಮೋನ 5 ಗೋಪಾಲ ಶೇರಿಗಾರಾ 5 ಸೀತಾರಾಮ 5 ಕೆ. ಚಂದ್ರ 5 ಬಿ. ಗಣೇಶ 5 ಕೆ. ರಾಮ 5 ವಿ. ನರಸಿಂಹ 5 ಶೇಖರ 5 ಎನ್. ಉಮೇಶ್ 5 ವಿ. ಆನಂದ 5 ಹೆಚ್. ಕರುಣಾಕರ 5 ಹೆಚ್. ಕುಷ್ಟ 5 ಬಿ. ನರಸಿಂಹ 5 ಬಿ. ಬಸವ 5 ಕೆ. ಗೋಪಾಲ 5 ಶೇಶಗಿರಿ 5 ವಿ. ಗೋವಿಂದ 5 ಭಾಸ್ಕರ 10 ಮುಕುಂದನ್ 5 ಕೆ. ಆನಂದ 10 ಕೆ. ಮುದುರ 5 ಶಂಕರ ಟೈಲರ್ 5 ಕೆ. ಸುಕುಮಾರ್ 25 ಗೋಪಾಲ ಶೆಟ್ಟಿಗಾರ 10 ಕೆ. ವಿಶ್ವನಾಥ 5 ಮೋಹನ್ ಸರಂಗ 5 ಶಂಕರ್ ಕರ್ವಿ 5 ಬಸವ 5 ಸುಶೀಲ 5 ವಿ. ಮಹಬಲ 5 ಗಣೇಶ್ ಕಾರಂತ 5 ಟಿ.ಗುಲಾಬಿ 5 ಗೋಪಾಲ 5 ವೆಂಕಟೇಶ್ ನಾಯ್ಕ 5 ಅಕ್ಕಮ್ 5 ಸೀತಕ್ಕ 5 ಪದ್ದಕ್ಕ 5 ಗುರುರಾಜ 10 ಮಹಬಲ 5 ಕೆ. ಎನ್. ಸಂಜಯ 5 ಕೆ. ನಾರಾಯಣ ಆಚಾರಿ 5 ಸಂಜೀವ 5 ಆರ್‌ಬನ್ ಕೋಡ 5 ಚಂದ್ರ 5 ವಿ. ರತ್ನಾಕರ್ 5

[ಮುಂದುವರಿಯುತ್ತದೆ]

## ಕಾವ್ಯ ಲೋಕದ ಕೆಂಪು ತಾರೆ

# ಫೈಜ್ ಅಹ್ಮದ್ ಫೈಜ್

**ಫೈಜ್** ಅಹ್ಮದ್ ಫೈಜ್ ಕಾವ್ಯ ಹಾಗೂ ಭಾವಗೀತೆಯ ಸಾಕಾರ ರೂಪ. ಉರ್ದು ಬಾಷೆಯಲ್ಲಿ ತಮ್ಮ ಕಾಲೇಜು ದಿನಗಳಿಂದಲೇ ಕಾವ್ಯ ರಚಿಸಲಾರಂಭಿಸಿದ್ದ ಫೈಜ್ ಜನತೆಯ ಅಂತರಾಳವನ್ನು ಸ್ಪರ್ಶಿಸಬಲ್ಲ ಶಕ್ತಿಯನ್ನು ತಮ್ಮ ಕೃತಿಗಳೊಳಗೆ ತುಂಬಿದ್ದರು. ಕಮ್ಯೂನಿಸ್ಟ್ ಸಿದ್ಧಾಂತ, ಸಮಾಜವಾದೀ ಭಾವನೆಗಳು, ಟ್ರೇಡ್ ಯೂನಿಯನ್ ರಂಗದ ಅನುಭವಗಳು ಅವರನ್ನು ಓರ್ವ ಜನತೆಯ ಕವಿಯನ್ನಾಗಿ ರೂಪಿಸಿದ್ದವು.

ಈಗಿನ ಪಾಕಿಸ್ತಾನದ ಒಂದು ಭಾಗವಾಗಿರುವ ಸ್ಯಾಲ್ ಕೋಟ್ ಎಂಬಲ್ಲಿ 1911, ಫೆಬ್ರವರಿ 13 ರಂದು ಜನಿಸಿದ ಫೈಜ್ ಲಾಹೋರಿನಲ್ಲಿ ಎಂ.ಎ.ಪದವಿ ಪಡೆದು ಇಂಗ್ಲಿಷ್ ಅಧ್ಯಾಪಕರಾಗಿ ತಮ್ಮ ವೃತ್ತಿಯನ್ನು ಆರಂಭಿಸಿದರು. ಕಮ್ಯೂನಿಸ್ಟ್ ಪಕ್ಷದೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದ ಈ ಮಹಾನ್ ಕವಿ ತನ್ನ ಕಾವ್ಯದಲ್ಲಿ ಆಳವಾದ ಜೀವನ ಪ್ರೇಮವನ್ನು ತುಂಬಿದ್ದರ ಜೊತೆಗೆ, ಸಾಮ್ರಾಜ್ಯ ಶಾಹಿತ್ವವನ್ನು ಸರ್ವಾಧಿಕಾರವನ್ನು, ಮನುಷ್ಯ ಮನುಷ್ಯರ ನಡುವಿನ ಶೋಷಣೆಯನ್ನು ತೀವ್ರವಾಗಿ ದ್ವೇಷಿಸುವ ಕಿಡಿಗಳನ್ನು ತುಂಬಿದ್ದರು. ಶಾಂತಿಗಾಗಿ ಅವಿಶ್ರಾಂತ ಹೋರಾಟ ನಡೆಸಿದರು.

ಫೈಜ್ ಅಹ್ಮದ್ ಫೈಜ್ ಕ್ರಾಂತಿಕಾರೀ ಕವಿಯಷ್ಟೇ ಅಲ್ಲ ಜನತೆಯ ಚಳವಳಿಯ ಕ್ರಿಯಾಶೀಲ ಹೋರಾಟಗಾರ ಕೂಡ. ಫ್ಯಾಸಿಸ್ಟ್ ವಿರೋಧೀ ಯುದ್ಧ ತುತ್ತ ತುದಿಗೇರಿದ್ದಾಗ 1942 ರಿಂದ 46ರ ವರೆಗೆ ಭಾರತೀಯ ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದರು. 1947 ರಲ್ಲಿ ಅವರು "ಪಾಕಿಸ್ತಾನ್ ಟೈಮ್ಸ್" ನ ಸಂಪಾದಕರಾದರು. 1951ರ ಮಾರ್ಚ್‌ನಲ್ಲಿ ಪಾಕಿಸ್ತಾನ ಸರ್ಕಾರವನ್ನು ಉರುಳಿಸುವ ಸಂಚು ಮಾಡಿದರೆಂಬ ಆರೋಪದ ಮೇಲೆ ಅವರ ಬಂಧನವಾಯಿತು. ಐದು ವರ್ಷಗಳ ಕಾಲ ಅವರು ಸರಳುಗಳ ಹಿಂದೆ ಜೀವಿಸಿದರು. ದಬ್ಬಾಳಿಕೆ ಹಾಗೂ ಪ್ರತಿಗಾಮಿ ಶಕ್ತಿಗಳು ಸೋಲುತ್ತವೆಂಬ ದೃಡ ನಂಬಿಕೆಯಿಂದ ಸೆರೆಮನೆಯ ಚಿತ್ರ ಹಿಂಸೆಗಳನ್ನು ಧೈರ್ಯವಾಗಿ ಎದುರಿಸಿದರು. ತುಳಿತಕ್ಕೊಳಗಾದವರಿಗಾಗಿ, ಪ್ರಜಾಪ್ರಭುತ್ವಕ್ಕಾಗಿ ಹಾಗೂ ಸಮಾಜವಾದಕ್ಕಾಗಿ ನಡೆಯುವ ಹೋರಾಟದ ಬೆಂಕಿಯನ್ನು ಯಾವುದೇ ದಬ್ಬಾಳಿಕೆಯಿಂದಲೂ ನಾಶ ಮಾಡಲಾಗುವುದಿಲ್ಲ ಎಂಬುದನ್ನು ಫೈಜ್ ಎತ್ತಿ ತೋರಿಸಿದರು. 1955 ರಲ್ಲಿ ಅವರ ಬಿಡುಗಡೆಯಾದಾಗ ಫೈಜ್ ಅವರನ್ನು ಗಲ್ಲಿಗೇರಿಸಬಹುದೆಂಬ ಶಂಕೆ ನಿವಾರಣೆಯಾಗಿ ಜಗತ್ತಿನಾದ್ಯಂತ ಇರುವ ಪ್ರಜಾಸತ್ತಾತ್ಮಕ ಶಕ್ತಿಗಳು ನಿರಾಳವಾಗಿ ಉಸಿರಾಡಿತು.

ಸೆರೆವಾಸದ ಕಾಲದಲ್ಲಿ ಅಂಟಿಕೊಂಡ ಆಸ್ತಮಾ ಕಾಯಿಲೆಯಿಂದ ನರಳುತ್ತಿದ್ದರೂ ಕೂಡ ಆಧುನಿಕ, ಜಾತ್ಯಾತೀತ, ಪ್ರಗತಿಪರ ಪಾಕೀಸ್ತಾನಕ್ಕಾಗಿ ಇಡೀ ಜಗತ್ತಿನ ಜನರ ಸೌಖ್ಯಕ್ಕಾಗಿ ಹೋರಾಡಿದ ತನ್ನ ಕಾವ್ಯದಲ್ಲಿ ವರ್ಗ ಹೋರಾಟವನ್ನು, ವರ್ಗ ದೃಷ್ಟಿಕೋನವನ್ನು ಸಾಮ್ರಾಜ್ಯಶಾಹಿ ವಿರೋಧವನ್ನು, ಜನತೆಯ ಸಂಕಷ್ಟಗಳನ್ನು, ಹೊಸ ಸಮಾಜದ ಕನಸುಗಳನ್ನು ಪ್ರತಿ ಫಲನಕ್ಕೊಳಪಡಿಸಿದ್ದ ಫೈಜ್ ಅಹ್ಮದ್ ಫೈಜ್, ನವೆಂಬರ್ 27 ರಂದು ಲಾಹೋರ್ ನ ಆಸ್ಪತ್ರೆಯಲ್ಲಿ ಆಸ್ತಮಾದ ಉಲ್ಬಣದಿಂದ ಅಸುನೀಗಿದರು.

ಜನತೆಯ ಕವಿಯಾಗಿ ಅವರ ಹೃದಯಗಳನ್ನು ಶ್ರೇಷ್ಠ ಭಾವನೆಗಳಿಂದ ಆರಳಿಸಿದ ಫೈಜ್ ಅಹ್ಮದ್ ಫೈಜ್ ರವರು ಕಾವ್ಯಲೋಕದಲ್ಲೊಂದು ಚಿರ ನೆನಪನ್ನು ಉಳಿಸಿ ಹೋಗಿದ್ದಾರೆ. ಅವರ ಸಾವಿಗೆ ಐಕ್ಯರಂಗ ಆಳವಾದ ಶೋಕವನ್ನು ವ್ಯಕ್ತಪಡಿಸಿ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

## ಕೈಗೊಂಬೆ ಕಾರ್ಮಿಕ ಸಂಘಗಳಿಂದ ಒಪ್ಪಂದ

# ಪ್ಲಾಂಟೇಶನ್ ಕಾರ್ಮಿಕರಿಗೆ ದ್ರೋಹ

ಈಗ ದಿನ ದಿನಕ್ಕೆ ಕಾವೇರುತ್ತಿರುವ ರಾಜಕೀಯ ವಾತಾವರಣದ ನಡುವೆಯೇ ಕರಣಾಜನಕ ಸ್ಥಿತಿಯಲ್ಲಿ ದುಡಿಯುತ್ತಿರುವ ಕರ್ನಾಟಕದ ಪ್ಲಾಂಟೇಷನ್ ಕಾರ್ಮಿಕರು ಅವರ ಕುಟುಂಬ ವರ್ಗದ ಹತ್ತು ಹನ್ನೆರಡು ಲಕ್ಷ ಜನರ ಜೀವನ ಮಟ್ಟವನ್ನು 1987 ರವರೆವಿಗೂ ಮತ್ತಷ್ಟು ಪ್ರಪಾತಕ್ಕೆ ತಳ್ಳುವ ಒಪ್ಪಂದವೊಂದಕ್ಕೆ 3-12-84 ರ ಮಧ್ಯರಾತ್ರಿ ಕರ್ನಾಟಕ ಪ್ಲಾಂಟೇಷನ್ ಮಾಲೀಕರ ಸಂಘದ ಮತ್ತು ಕೆಲವು ಕೈಗೊಂಬೆ ಕಾರ್ಮಿಕ ಸಂಘಗಳ ಮಧ್ಯೆ ಸಹಿಯಾಯಿತು.

ಮುಗಿಲಿಗೆ ಮುಟ್ಟುತ್ತಿರುವ ಬೆಲೆಗಳ ಈ ದಿನಗಳಲ್ಲಿ 84-85 ರಲ್ಲಿ 45 ಪೈಸೆ [ದಿನ ಲೆಕ್ಕ] 85-86 ರಲ್ಲಿ ದಿನಕ್ಕೆ 35 ಪೈಸೆ, 86-87 ರಲ್ಲಿ ಕೇವಲ 10 ಪೈಸೆ ಏರಿಕೆಯ. ಬಿಡಿಕಾಸಿನ ಒಪ್ಪಂದಕ್ಕೆ ಸಹಿ ಹಾಕಿದವರು ಇಂಟಕ್ ಮತ್ತಿತರ ಕೆಲವು ಸ್ವತಂತ್ರ ಕಾರ್ಮಿಕ ಸಂಘಟನೆಗಳು. ಇದನ್ನು ಮುಂದು ನಿಂತು ಮಾಲೀಕರೊಡನೆ ಪೂರ್ಣ ಶ್ಯಾಮೀಲಾಗಿ ಸಹಿ ಹಾಕಿಸಿದವರು ಜಂಟಿ ಕಾರ್ಮಿಕ ಆಯುಕ್ತರಾದ ಶ್ರೀ ಜಯಲಿಂಗಪ್ಪನವರು. ಈ ಒಪ್ಪಂದಕ್ಕಾಗಿ ಈ ಜಂಟಿ ಸಭೆಯಲ್ಲಿ ಮಾಲೀಕರ ಮತ್ತು ಕಾರ್ಮಿಕರ ನಡುವೆ ಮಾತುಕತೆ ಮಧ್ಯಸ್ಥಿಕೆ ವಹಿಸಬೇಕಾಗಿದ್ದ ಈ ಕಾರ್ಮಿಕ ಇಲಾಖೆಯ ಅಧಿಕಾರಿ ತಾವೇ ಮಾಲೀಕರ ಏಜೆಂಟರಂತೆ ವರ್ತಿಸಿದ್ದು ಹೇಯವಾದದ್ದು.

ನೆರೆ ರಾಜ್ಯಗಳಾದ ತಮಿಳುನಾಡು, ಕೇರಳಗಳಲ್ಲಿ ತೋಟ ಕಾರ್ಮಿಕರಿಗೆ ದಿನಕ್ಕೆ 15-16 ರೂಪಾಯಿ ದಿನಗೂಲಿ ಇರುವಾಗ ಕರ್ನಾಟಕದಲ್ಲಿ ಕೇವಲ 9.30 ರೂ. ಆಗಿದೆ. ಅಲ್ಲದೇ ವರ್ಷದಿಂದ ವರ್ಷಕ್ಕೆ 10 ಪೈಸೆ 35 ಪೈಸೆ ಏರಿಕೆಯ ಒಪ್ಪಂದವಾಗಿದೆ. ಈ ಕಾರ್ಮಿಕ ವಿರೋಧಿ ಒಪ್ಪಂದವನ್ನು ಸಿ.ಐ.ಟಿ.ಯು. ನೇತೃತ್ವದ ಕರ್ನಾಟಕ ತೋಟ ಕಾರ್ಮಿಕರ ಸಂಘ ಸಕಲೇಶಪುರ, ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಬಹಿಷ್ಕರಿಸಿದೆ. ●

## ಎ.ಎಲ್.ಸಿ. ಕಚೇರಿಯ ಮುಂದೆ ಧರಣಿ

ದಿನಾಂಕ 28 ರಂದು ಹುಬ್ಬಳ್ಳಿ ಧಾರವಾಡ ಮಹಾನಗರ ಜಂಟಿ ಹೋರಾಟ ಕ್ರಿಯಾ ಸಮಿತಿಯು ಇತ್ತೀಚಿಗೆ ಹುಬ್ಬಳ್ಳಿ ಅಲಂಡಾ ಕಾರಖಾನೆಯ ನ್ಯಾಯ ಬಾಹಿರ ಮುಚ್ಚುವಿಕೆ ಕೆ.ಇ.ಸಿ. ದಿನಗೂಲಿ ನೌಕರರ ಹೋರಾಟ ಅಲ್ಲದೆ ಧಾರವಾಡದ ಟೈವಾಕ್ ಕಾರ್ಮಿಕರ ಹೋರಾಟಗಳಲ್ಲಿ ಸರಕಾರ ತೀವ್ರವೇ ಗಮನಹರಿಸಿ ಅವುಗಳನ್ನು ಬಗೆಹರಿಸುವಲ್ಲಿ ಆಸಕ್ತಿ ವಹಿಸಬೇಕು. ಅಲ್ಲದೆ ಇಲ್ಲಿಯವರೆಗೆ ಹುಬ್ಬಳ್ಳಿಯ ಎ.ಎಲ್.ಸಿ. ಯವರು ಯಾವಾಗಲೂ ಮಾಲಿಕರ ಪರ ಧೋರಣೆಯವರಾಗಿದ್ದು ತಮ್ಮ ಕಾರ್ಮಿಕ ವಿರೋಧಿ ನೀತಿಯಿಂದ ಕಾರ್ಮಿಕರ ಹೋರಾಟಗಳನ್ನು ಹತ್ತಿಕ್ಕಲು ಸಹ ಮಾಲಿಕರಿಗೆ ಸಹಾಯಕರಾಗಿದ್ದಾರೆ ಇದನ್ನು ಪ್ರತಿಭಟಿಸಲು ಹಾಗು ಸರ್ಕಾರದ ಮಧ್ಯಸ್ಥಿಕೆ ವಹಿಸಿ ನ್ಯಾಯಬಾಹಿರ ಮುಚ್ಚುವಿಕೆ ಮುಂತಾದವುಗಳನ್ನು ಬಗೆಹರಿಸಲು ಒತ್ತಾಯಿಸಲು ಒಂದು ದಿನದ ಸಾಂಕೇತಿಕ ಧರಣಿ ಕಾರ್ಯಕ್ರಮವನ್ನು ಹಾಕಿತ್ತು. ಸರಜೆಗೆ ಹೋರಾಟ ಕ್ರಿಯಾ ಸಮಿತಿಯ ವತಿಯಿಂದ ಎ.ಎಲ್.ಸಿ.ಗೆ ಮನವಿ ಕೊಡಲಾಯ್ತು, ನಂತರ ನಡೆದ ಬಹಿರಂಗ ಸಭೆಯಲ್ಲಿ ಕಾ|| ಎಂ. ಬಿ. ಕಟ್ಟಿ, ಜಿ. ಆರ್. ಸಿಂಪುರ, ಸೋಮಪುರ, ತಳವಾರ, ಕೃಷ್ಣ ಕಟ್ಟಿ ಮುಂತಾದವರು ಮಾತಾಡಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿ ಸರಕಾರ ಮಧ್ಯಸ್ಥಿಕೆ ವಹಿಸಬೇಕೆಂದು ಒತ್ತಾಯಿಸಿದರು. ○

## ಮನೆ ನಿವೇಶನಕ್ಕಾಗಿ ಸಾಮೂಹಿಕ ಅರ್ಜಿ

ತಾ|| 26-11-84 ನೇ ಸೋಮವಾರ ಸೌತ್ ಕೆನರಾ ವೀವರ್ಸ್ ಯೂನಿಯನಿನ ಪ್ರಧಾನ ಕಾರ್ಯದರ್ಶಿಯಾದ ಕಾ|| ಕೆ. ಪೂವಪ್ಪ ಸಾಲ್ಯಾನ್‌ರವರ ನೇತೃತ್ವದಲ್ಲಿ ಕೈ ಮಗ್ಗದಲ್ಲಿ ಕೆಲಸ ಮಾಡುವ ಬಾಡಿಗೆ ಮನೆಯಲ್ಲಿ ವಾಸಿಸುವ ಸುಮಾರು 64 ಮಜೂರರು ಮಂಗಳೂರು ತಾಲೂಕು ಬಜಾಲ್ ಗ್ರಾಮದಲ್ಲಿರುವ ಸರಕಾರಿ ಭೂಮಿಯಲ್ಲಿ ತಮಗೆ ಮನೆ ಕಟ್ಟಲು ಮನೆ ನಿವೇಶನ ಕೊಡಬೇಕೆಂದು ಮಂಗಳೂರು ತಾಲೂಕು ತಹಶೀಲ್ದಾರ್‌ರವರಿಗೆ ಮನವಿಯನ್ನು ಅರ್ಪಿಸಿ ತಾವು ಬಾಡಿಗೆ ಮನೆಯಲ್ಲಿ ಪಡುವ ಕಷ್ಟಗಳನ್ನು ವಿವರಿಸಿದರು.

ಈ ಬಗ್ಗೆ ಸದ್ರಿ ಮನವಿಯನ್ನು ಅಂಗೀಕರಿಸಿದ ಮಂಗಳೂರು ತಾಲೂಕು ತಹಶೀಲ್ದಾರರು ತನ್ನಿಂದಾದ ಎಲ್ಲಾ ಪ್ರಯತ್ನವನ್ನು ಮಾಡುವೆನೆಂದು ಮನವಿಯಿತ್ತ ಕೈ ಮಗ್ಗದಲ್ಲಿ ಕೆಲಸ ಮಾಡುವ ಮಜೂರರಿಗೆ ಭರವಸೆ ಇತ್ತರು.

## ಶಾಲೆ ಉದ್ಘಾಟನೆ

ಸಿಂಧನೂರು ತಾಲೂಕಿನ ರಾಮನಗರ ಕ್ಯಾಂಪಿನಲ್ಲಿ ದಿನಾಂಕ : 29-11-1984 ರಂದು ಸಾಯಂಕಾಲ 5 ಗಂಟೆಗೆ ಕರ್ನಾಟಕ ಪ್ರಾಂತ ರೈತ ಸಂಘದ ಹೋರಾಟದ ಫಲವಾಗಿ ಮಂಜೂರಾದ ನೂತನ ಕಿರಿಯ ಪ್ರಾಥಮಿಕ ಶಾಲೆ ಉದ್ಘಾಟನೆ ಸಮಾರಂಭ ಮತ್ತು 87 ಜನ ಕೃಷಿ ಕಾರ್ಮಿಕರಿಗೆ ನಿವೇಶನಗಳ ಹಂಚಿಕೆಯ ಸಮಾರಂಭ ಕಾರ್ಯಕ್ರಮ ಜರುಗಿತು. ಈ ಸಭೆಯ ಅಧ್ಯಕ್ಷತೆಯನ್ನು ತಾಲೂಕು ಸಮಿತಿ ಅಧ್ಯಕ್ಷರಾದ ಕಾ|| ಬಸವರಾಜಪ್ಪ ವಕೀಲರು ವಹಿಸಿ ಶಾಲೆಯ ಉದ್ಘಾಟನೆಯನ್ನು ಮಾಡಿದರು. ಮುಖ್ಯ ಅತಿಥಿಗಳಾಗಿ ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿಗಳಾದ ಪುರುಶೊತ್ತಮ ಕಲಾಬಂಡಿ ಆಗಮಿಸಿದ್ದರು. ನಿವೇಶನ ಹಂಚಿಕೆಯನ್ನು ನ್ಯಾಯವಾದಿ ಹನುಮಂತಪ್ಪ ಗುಡಿ ಮಾಡಿದರು. ಈ ಸಭೆಯನ್ನು ಉದ್ದೇಶಿಸಿ ಹೆಚ್. ಕಲ್ಯಾಣಪ್ಪ ರೌಡಕುಂದಿ, ಕೆ. ಸುಬ್ಬರಾವ್, ಪ್ರಾಥಮಿಕ ಶಾಲಾ ಮುಖ್ಯ ಉಪಾಧ್ಯಾಯರಾದ ಕೊಟ್ರಪ್ಪನವರು ಮಾತನಾಡಿದರು. ಈ ಸಂಧರ್ಬದಲ್ಲಿ ಸಹೋದರ ಸಂಘಟನೆಯವರಿಂದ ಶುಭ ಕೋರಲಾಯಿತು. ವೆಂಕಟೇಶ್ವರರಾವ್ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು. ○

## ಸಂತಾಪ ಸಭೆ

ಮಂಳೂರು ಬಿಕರ್ಣ ಕಟ್ಟೆಯ ಕಾ. ವಿ. ಆನಂದ್ ರವರು ತಾ. 12-11-84 ರಂದು ನಿಧನರಾದರು. ಶ್ರೀಯುತರು ಪಕ್ಷದ ಸದಸ್ಯರಾಗಿದ್ದು, ಕಾರ್ಮಿಕ ವರ್ಗದ ಕ್ರಾಂತಿಕಾರಿ ಚಳವಳಿಯಲ್ಲಿ ಅವಿಶ್ರಾಂತವಾಗಿ ದುಡಿಯುತ್ತಿದ್ದರು. ಬೀಡಿ ಕಾರ್ಮಿಕ ಸಂಘಟನೆಯಲ್ಲಿ ಸಕ್ರೀಯ ಪಾತ್ರ ವಹಿಸಿದ್ದ ಕಾ. ಆನಂದ್ ರವರ ನಿಧನಕ್ಕೆ ಕಾ. ಎ. ಈಶ್ವರ್ ರವರ ಅಧ್ಯಕ್ಷತೆಯಲ್ಲಿ ಸೇರಿದ್ದ ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಸಭೆ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ○

## ಮೈಸೂರು ಡಿ. ಇ. ಟಿ. ನೌಕರರ ಉಪವಾಸ ಸತ್ಯಾಗ್ರಹ

ಮೈಸೂರಿನ ತಂತಿ ವಿಭಾಗದ ಆಡಳಿತಾಧಿಕಾರಿಯವರು ನೌಕರರಿಗೆ ಕೊಡುತ್ತಿರುವ ಕಿರುಕುಳದ ವಿರುದ್ಧ ಇಲ್ಲಿನ ಟೆಲಿಫೋನ್ ವಿಭಾಗದ ಕಾರ್ಯದರ್ಶಿಗಳಾದ ಕಾ. ಮುಕುಂದನ್ ಅವರು ತಾ 26-11-1984 ರಿಂದ ಅನಿರ್ದಿಷ್ಟ ಕಾಲದ ಉಪವಾಸ ಮುಷ್ಕರವನ್ನು ಕೈಕೊಂಡರು. ನಂತರ ಹಿರಿಯ ಅಧಿಕಾರಿಗಳ ನಡುವೆ ನಡೆದ ಲಿಖಿತ ಒಪ್ಪಂದದ ಮೇರೆಗೆ 30 ರಂದು ತಮ್ಮ ನಿರಶನವನ್ನು ನಿಲ್ಲಿಸಲಾಯಿತು.

# ಭೂಪಾಲ್ ದುರಂತ - ಸಾವಿನ ರುದ್ರ ನರ್ತನ

ಡಿಸೆಂಬರ್ 2ನೇ ತಾರೀಖಿನ ರಾತ್ರಿ ಮಧ್ಯಪ್ರದೇಶದ ರಾಜಧಾನಿ ಭೂಪಾಲ್‌ನಲ್ಲಿರುವ ಕೀಟನಾಶಕ ಉತ್ಪಾದಿಸುವ ಬಹು ರಾಷ್ಟ್ರೀಯ ಸಂಸ್ಥೆ ಯೂನಿಯನ್ ಕಾರ್ಬೈಡ್‌ನಲ್ಲಿ "ಮಿಥೈಲ್ ಐಸೋ ಸಯನೈಡ್" ಎಂಬ ವಿಷಾನಿಲದ ಸೋರಿಕೆಯ ಪರಿಣಾಮವಾಗಿ, ಭೂಪಾಲ್ ನಗರದ 40 ಚದರ ಕಿಲೋ ಮೀಟರ್ ವಿಸ್ತೀರ್ಣದ ಪ್ರದೇಶ ವಿಷಮಯವಾಗಿ ಸಾವಿರಾರು ಜನರು ಕೀಟಗಳಂತೆ ಸತ್ತಿದ್ದಾರೆ. ಈ ಘಟನೆ ಭಾರತದ ಜನರನ್ನಷ್ಟೆ ಅಲ್ಲ ಇಡೀ ಜಗತ್ತಿನ ಜನರನ್ನು ತಲ್ಲಣಗೊಳಿಸಿದೆ. ಲಕ್ಷಾಂತರ ಜನರು ಕುರುಡು ಮತ್ತಿತರ ದೈಹಿಕ ಊನತೆಗೆ ಒಳಗಾಗಿ ತಮ್ಮ ಇಡೀ ಜೀವಮಾನವನ್ನು ಕಳೆಯ ಬೇಕಾಗಿದೆ ಎಂಬ ಸಂಗತಿ ಎದೆ ನಡುಗಿಸುವಂಥಹುದು.

ನಿಜವಾಗಿಯೂ ಈ ಘಟನೆಯನ್ನು ವಿವರಿಸಲು ಶಬ್ದಗಳು ಅಸಮರ್ಥವಾಗಿವೆಯೆಂದು ಅನಿಸುತ್ತದೆ.

ಈ ಘೋರ ದುರಂತದ ಪರಿಣಾಮ ಮುಂದಿನ ಅನೇಕ ಪೀಳಿಗೆಯ ವರೆಗೆ ಮುಂದುವರಿಯುತ್ತದೆಂಬ ತಜ್ಞರ ಅಭಿಪ್ರಾಯವನ್ನು ನೋಡಿದರೆ ಭೂಪಾಲ್ ನಗರವೂ ಕೂಡ ಹಿರೋಶಿಮಾ ನಾಗಸಾಕಿಗಳಂತೆ ಇತಿ ಹಾಸದಲ್ಲಿ ಒಂದು ಕ್ರೂರ ನೆನಪಾಗಿ ಉಳಿಯುವುದೆಂದು ತೋರುತ್ತದೆ.

ಲಾಭ ಗಳಿಕೆಯೊಂದನ್ನೇ ತನ್ನ ಗುರಿಯಾಗಿಟ್ಟುಕೊಂಡು, ಜನತೆಯ ಹಿತವನ್ನು ಅತ್ಯಂತ ನಿಕೃಷ್ಟವಾಗಿ ಪರಿಗಣಿಸಿ ಘೋರ ದುರಂತಕ್ಕೆ ಕಾರಣವಾಗಿರುವ ಅಮೇರಿಕದ ಬಹುರಾಷ್ಟ್ರೀಯ ಸಂಸ್ಥೆಯ ಉದಾಸೀನ ಪ್ರವೃತ್ತಿ ಅಕ್ಷಮ್ಯ ಹಾಗೂ ಘೋರ ಅಪರಾಧ. ತೃತೀಯ ಜಗತ್ತಿನ ರಾಷ್ಟ್ರಗಳ ಬಡ ಕಾರ್ಮಿಕರನ್ನು ಶೋಷಿಸಿ, ಅವರ ಜೀವದೊಂದಿಗೆ ಚೆಲ್ಲಾಟವಾಡಿ ತನ್ನ ಸಂಪತ್ತನ್ನು ಅಪಾರವಾಗಿ ವೃದ್ಧಿಸಿಕೊಳ್ಳುವ ಇಂಥ ಕಂಪೆನಿಗಳ ಲಾಭ ಕೋರತನವನ್ನು ಬಯಲಿಗೆಳೆದು ಅಂಥವುಗಳ ವಿರುದ್ಧ ಜನತೆಯನ್ನು ಎಚ್ಚರಿಸಬೇಕಾದ ಅಗತ್ಯ ಈಗ ಒದಗಿ ಬಂದಿದೆ.

1970 ರಲ್ಲಿ ಪ್ರಾರಂಭಗೊಂಡ ಈ ಕಾರ್ಖಾನೆಯಲ್ಲಿ ವಿಷಾನಿಲ ಸೋರಿರುವುದು ಇದೇ ಮೊದಲ ಸಲವೇನಲ್ಲ. ಈ ಹಿಂದೆ ಎರಡು ಸಲ 1978 ರಲ್ಲಿ ಹಾಗೂ 1981 ರಲ್ಲಿ ಅನಿಲ ಸೋರಿಕೆ ಯಾದಾಗಲೇ ಮುಂಜಾಗ್ರತಾ ಕ್ರಮವನ್ನು ವಹಿಸಿದ್ದಲ್ಲಿ ಇಷ್ಟೊಂದು ಘೋರ ದುರಂತವನ್ನು ತಪ್ಪಿಸ ಬಹುದಿತ್ತು. ಇನ್ನೂ ಹೇಳಬೇಕೆಂದರೆ ಜನನಿಬಿಡ ಪ್ರದೇಶಗಳಲ್ಲಿ ಇಂಥ ಅಪಾಯಕಾರೀ ಕಾರ್ಖಾನೆಗಳನ್ನು ಸ್ಥಾಪಿಸಲು ಸರ್ಕಾರ ಅನುಮತಿ ನೀಡಬಾರದಿತ್ತು. ಇಂಥ ಕಂಪೆನಿಗಳು ಭಾರತದಂಥ ದೇಶಗಳ ಮೇಲೆ ಹೇಗೆ ತನ್ನ ಹತೋಟಿಯನ್ನು ಸ್ಥಾಪಿಸಿ, ಕಾರ್ಖಾನೆಗೆ ಅನುಮತಿ ದೊರಕಿಸಿಕೊಳ್ಳುತ್ತವೆಂಬುದನ್ನು ನೋಡಿದರೆ ಇವುಗಳಿಗೆ ದೇಶವನ್ನು ಒತ್ತೆ ಇಟ್ಟಿರುವ ವ್ಯವಸ್ಥೆಯ ಧೋರಣೆಗಳಲ್ಲಿರುವ ದೋಷಗಳು ಅರ್ಥವಾಗುತ್ತವೆ.

ಯೂನಿಯನ್ ಕಾರ್ಬೈಡ್ ಕಾರ್ಖಾನೆ ಮತ್ತೆ ಪ್ರಾರಂಭಮಾಡಲು ಅವಕಾಶ ನೀಡುವುದಿಲ್ಲವೆಂಬ ಮಧ್ಯ ಪ್ರದೇಶ ಸರ್ಕಾರದ ತೀರ್ಮಾನ ಸಮಂಜಸವಾದುದು. ಹಾಗೆಯೇ ಸತ್ತವರ ಮತ್ತು ತೊಂದರೆಗೆ ಈಡಾಗಿರುವವರಿಗೆ ಪರಿಹಾರ ನೀಡಬೇಕೆಂದು ಅಮೇರಿಕದ ವಕೀಲರುಗಳು ಹೂಡಿರುವ ಖಟ್ಲೆ ಸ್ವಾಗತಾರ್ಹ. ಏನೇ ಆದರೂ ಯಾವುದೇ ಪರಿಹಾರವೂ ಈಗ ಆಗಿರುವ ಜೀವ ಹಾನಿಯನ್ನು ತುಂಬಲಾರದು. ಸಂಸ್ಥೆಯು ಒಂದು ವೇಳೆ ಕೇಳಿದಷ್ಟು ಪರಿಹಾರ ಕೊಡಬಹುದು. ಆದರೆ ಈಗ ಆಗಬೇಕಾಗಿರುವುದು ಅಂಥ ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ಕುರಿತು ಜನರಲ್ಲಿ ಎಚ್ಚರಿಕೆಯನ್ನು ತುಂಬುವ ಕೆಲಸ ಮತ್ತು ಅಪಾಯಕರ ಎನಿಸುವ ಕಾರ್ಖಾನೆಗಳನ್ನು ಸ್ಥಾಪಿಸುವ ವಿರುದ್ಧ ಸರಕಾರದ ಮೇಲೆ ಒತ್ತಡವನ್ನು ತಂದು ಇನ್ನು ಮುಂದೆ ಇಂಥ ಕ್ರೂರ ಸಾವುಗಳು ಸಂಭವಿಸದಂತೆ ತಡೆಯುವುದು.

# ಆಂಧ್ರದಲ್ಲಿ ಸಿಪಿಐನ ಅಪಪ್ರಚಾರ

ಆಂಧ್ರ ಪ್ರದೇಶದ ಖಮ್ಮಮ್ ಮತ್ತು ಮಿರಿಯಾಲಗುಡ ಕ್ಷೇತ್ರಗಳಲ್ಲಿ ಸಿ. ಪಿ. ಐ. [ಎಂ] ವಿರುದ್ಧ ಸ್ಪರ್ಧಿಸಿರುವುದನ್ನು ಸಮರ್ಥಿಸಿಕೊಳ್ಳಲು ವಿಫಲಗೊಂಡಿರುವ ಸಿ.ಪಿ.ಐ., ಕಾಂಗ್ರೆಸ್ [ಐ] ಅನ್ನು ಸೋಲಿಸುವುದನ್ನು ಬಿಟ್ಟು ಸಿ. ಪಿ. ಐ. [ಎಂ] ನ ವಿರುದ್ಧ ಸುಳ್ಳು ಪ್ರಚಾರದ ಧಾಳಿಯನ್ನು ಆರಂಭಿಸಿದೆ. ಸಿಪಿಐ ತನ್ನ ಮುಖ ಪತ್ರ "ನ್ಯೂಏಜ್" ನ ಮೊದಲ ಪುಟದಲ್ಲೇ ಆಂಧ್ರದಲ್ಲಿ ಬಿ.ಜೆ.ಪಿ. ಯೊಂದಿಗೆ ಸಿ.ಪಿ.ಐ. [ಎಂ] ಒಪ್ಪಂದ ಮಾಡಿಕೊಂಡಿದೆ ಎಂಬ ಸುದ್ದಿಯನ್ನು ಬಾಕ್ಸ್‌ನಲ್ಲಿ ಪ್ರಕಟಿಸಿದೆ. ಈ ಬಗ್ಗೆ ನಾವು ಆಂಧ್ರದ ರಾಜ್ಯ ಸಮಿತಿಯನ್ನು ವಿಚಾರಿಸಲಾಗಿ, ಅದು ಶುದ್ಧ ಸುಳ್ಳು ಮತ್ತು ಆಧಾರ ರಹಿತ ಎಂಬುದಾಗಿ ತಿಳಿದು ಬಂದಿದೆ. ಯಾರೊಂದಿಗೆ ಸಿ.ಪಿ.ಐ. [ಎಂ] ಒಪ್ಪಂದಕ್ಕೆ ಬಂದಿದೆಯೆಂದು ಆರೋಪಿಸಿತ್ತೋ ಆ ಬಿ.ಜೆ.ಪಿ. ಮುಖಂಡನನ್ನು ಬಿಜೆಪಿ ಸಸ್ಪೆಂಡ್ ಮಾಡಿದೆ. ಕೆಲವು ಸ್ಥಾನಗಳಲ್ಲಿ ಕಾಂಗ್ರೆಸ್ (ಐ) ಅಭ್ಯರ್ಥಿಗಳಿಗೆ ಬೆಂಬಲ ನೀಡುವ ತಂತ್ರಕ್ಕಾಗಿ ಇಂತಹ ಸುಳ್ಳು ಆರೋಪಗಳನ್ನು ಸಿಪಿಐ [ಎಂ] ನ ವಿರುದ್ಧ ಹರಡಲಾಗುತ್ತಿದೆ ಎಂಬುದಾಗಿ ಆಂಧ್ರ ರಾಜ್ಯ ಸಮಿತಿ ನಮಗೆ ತಿಳಿಸಿದೆ.

ಸಿ.ಪಿ.ಐ. ನ ಸ್ಥಳೀಯ ಘಟಕಗಳು ಬಹಿರಂಗವಾಗಿಯೇ ಕೇಂದ್ರ ಗೃಹ ಮಂತ್ರಿ ಪಿ. ವಿ. ನರಸಿಂಹರಾವ್ ಮತ್ತು ಕೇಂದ್ರ ಮಂತ್ರಿ ವಿಜಯ ಭಾಸ್ಕರ ರೆಡ್ಡಿ ಅವರನ್ನು ಬೆಂಬಲಿಸುತ್ತಿವೆ.

ಸಿ. ಪಿ. ಐ. ನ ಇಂಥ ಚಟುವಟಿಕೆಗಳು ಆಂಧ್ರದಲ್ಲಿ ಕಾಂಗ್ರೆಯನ್ನು ಬಲಗೊಳಿಸಲು ಮಾತ್ರ ಸಹಾಯಕವಾಗಿದೆ.

ಸಿ.ಪಿ.ಐ. [ಎಂ] ಅನ್ನು ಸೋಲಿಸುವ ಸಲುವಾಗಿ ಸಿ. ಪಿ. ಐ. ಮಣಿಪುರದಲ್ಲಿ ನಮ್ಮ ಪಕ್ಷದ ಹಾಲಿ ಶಾಸಕರ ವಿರುದ್ಧ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿದೆ. ಅಲ್ಲದೆ ಸಿ. ಪಿ. ಐ. [ಎಂ] ಅಭ್ಯರ್ಥಿಯ ಚುನಾವಣಾ ಚಿಹ್ನೆ ಯನ್ನು ರದ್ದು ಪಡಿಸುವಂತೆ ಕೂಡ ಮುಖ್ಯ ಚುನಾವಣಾಧಿಕಾರಿಗೆ ಮನವಿ ಮಾಡಿದೆ.

ಸಿ. ಪಿ. ಐ. [ಎಂ] ವಿರೋಧಿ ಮನೋಭಾವವನ್ನು ತ್ಯಜಿಸುವಂತೆ ಸಿಪಿಐ ನಾಯಕತ್ವವನ್ನು ನಾವು ವಿನಂತಿಸುತ್ತೇವೆ. ಇಲ್ಲವಾದಲ್ಲಿ ಎಡ ಶಕ್ತಿಗಳು ದುರ್ಬಲಗೊಂಡು ಕಾಂಗ್ರೆ ಅನ್ನು ಹಾಗೂ ಪ್ರತ್ಯೇಕತಾ ವಾದಿಗಳನ್ನು ಸೋಲಿಸಲು, ನಮ್ಮ ದೇಶದ ಐಕ್ಯತೆಗೆ ಅಪಾಯ ಒಡ್ಡಿರುವ ಸಾಮ್ರಾಜ್ಯ ಶಾಹಿ ಶಕ್ತಿಗಳನ್ನು ಎದುರಿಸಲು ಇದರಿಂದ ತೊಂದರೆಯಾಗುತ್ತದೆ.

[ಸಿ. ಪಿ. ಐ. [ಎಂ] ನ ಪೊಲಿಟ್ ಬ್ಯೂರೋ ಸದಸ್ಯರಾದ ಕಾ. ಹರಕಿಶನ್ ಸಿಂಗ್ ಸುರ್ಜಿತ್ ಸಿ. ಪಿ. ಐ. ಗೆ ನೀಡಿರುವ ಉತ್ತರ]

# ಇವುಗಳಿಗೆ ಯಾರು ಹೊಣೆ ?

## 34 ವರ್ಷ ದೇಶವನ್ನಾಳಿದ ಪಕ್ಷ ಉತ್ತರಿಸಲಿ

* 5 ವರ್ಷಗಳಲ್ಲಿ ಎರಡು ಪಟ್ಟು ಏರಿದ ಬೆಲೆಗಳಿಗೆ
* ಎರಡೂವರೆ ಕೋಟಿ, ಕಲಿತ ಯುವಕರು ಕೆಲಸವಿಲ್ಲದೆ ಪರದಾಡುತ್ತಿರುವುದಕ್ಕೆ
* 30,000 ಕೈಗಾರಿಕೆಗಳು ಮುಚ್ಚಿ ಲಕ್ಷಾಂತರ ಕಾರ್ಮಿಕರು ಬೀದಿ ಪಾಲಾಗಿರುವುದಕ್ಕೆ
* 40 ಕೋಟಿ ಜನ ಬಡತನ ರೇಖೆಯ ಕೆಳಗೆ ಬಳಲಿ ಬೆಂಡಾಗಿರುವುದಕ್ಕೆ
* ರೂಪಾಯಿಯ ಬೆಲೆ 17 ಪೈಸೆಗೆ ಇಳಿದಿರುವುದಕ್ಕೆ
* ಶೇ. 70 ರಷ್ಟು ಜನ ಇನ್ನೂ ನಿರಕ್ಷರಕುಕ್ಷಿಗಳಾಗಿರುವುದಕ್ಕೆ
* ಪ್ರತಿಯೊಬ್ಬ ಭಾರತೀಯನ ಮೇಲೆಯೂ ಸರಾಸರಿ 260 ರೂ ಸಾಲದ ಹೊರೆ ಏರಿರುವುದಕ್ಕೆ

34 ವರ್ಷ ರಾಜ್ಯಭಾರ ಮಾಡಿರುವ ಕಾಂಗ್ರೆಸ್ ಪಕ್ಷವೇ ಇದಕ್ಕೆ ಹೊಣೆ.

●

ಕಾಂಗ್ರೆಸ್ (ಐ) ಪಕ್ಷವನ್ನು ಸೋಲಿಸಿ

ಎಡ ಪ್ರಜಾಸತ್ತಾತ್ಮಕ ಪಕ್ಷಗಳನ್ನು ಬೆಂಬಲಿಸಿ

## ಲೋಕಸಭಾ ಚುನಾವಣೆ ಸಿಪಿಐ (ಎಂ) ಅಭ್ಯರ್ಥಿಗಳು

ಪಶ್ಚಿಮ ಬಂಗಾಲ-31, ಕೇರಳ-10, ತಮಿಳು ನಾಡು-3, ಮಹಾರಾಷ್ಟ್ರ-2, ತ್ರಿಪುರ-2, ಆಂಧ್ರ ಪ್ರದೇಶ-2, ಮಧ್ಯ ಪ್ರದೇಶ-1, ರಾಜಸ್ಥಾನ-1, ಉತ್ತರ ಪ್ರದೇಶ-1, ಬಿಹಾರ-3, ಗುಜರಾತ್-1, ಕರ್ನಾಟಕ-1, ಒರಿಸ್ಸಾ-1, ಅಂಡಮಾನ್ ಮತ್ತು ನಿಕೋಬಾರ್ ದ್ವೀಪ-1.

ಸ್ಪರ್ಧಿಸಿರುವ ಒಟ್ಟು ಕ್ಷೇತ್ರಗಳು-60

## ಸಿ. ಐ. ಟಿ. ಯು. ಪತ್ರಿಕೆಯ ಓದುಗರಿಗೆ....

ಲೋಕಸಭಾ ಚುನಾವಣೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಮುದ್ರಣದ ತೊಂದರೆ ಇರುವುದರಿಂದ ಸಿ. ಐ. ಟಿ. ಯು. ಪತ್ರಿಕೆಯ ಡಿಸೆಂಬರ್ ಸಂಚಿಕೆಯನ್ನು ಜನವರಿ ತಿಂಗಳಿನಲ್ಲಿ ಹೊರಡಿಸಲಾಗುತ್ತದೆ. ಜನವರಿ ಸಂಚಿಕೆ ಮಾಮೂಲಾಗಿ ಆದೇ ತಿಂಗಳಿನಲ್ಲಿ ಬಿಡುಗಡೆಯಾಗುತ್ತದೆ.

—ವ್ಯವಸ್ಥಾಪಕ

(1ನೇ ಪುಟದಿಂದ)

ಕಾರ್ಖಾನೆ, ನೀರಾವರಿ ಯೋಜನೆಗಳಿಗೆ ಧನ ಸಹಾಯ, ಹೊಸ ರೇಲ್ವೆ ಮಾರ್ಗ ರಚನೆ, ಹಳೆ ರೇಲ್ವೆ ಮಾರ್ಗಗಳ ಬ್ರಾಡ್ ಗೇಜ್ ಆಗಿ ಪರಿವರ್ತನೆ ಮೊದಲಾದ ಬೇಡಿಕೆಗಳ ಸಲುವಾಗಿ ನಡೆಸುತ್ತಿರುವ, ರಾಜ್ಯಕ್ಕೆ ಕೇಂದ್ರದಿಂದ ಹೆಚ್ಚು ಸಂಪನ್ಮೂಲ ಒದಗಿಸಬೇಕೆಂದು ಒತ್ತಾಯಿಸುತ್ತಿರುವ ಹೋರಾಟಗಳ ಕುರಿತು ಲೋಕಸಭೆಯಲ್ಲಿ ಧ್ವನಿ ಎತ್ತಲು ಅತ್ಯಂತ ಯೋಗ್ಯ ವ್ಯಕ್ತಿಯಾಗಿದ್ದಾರೆ. ಇಂಥವರನ್ನು ಲೋಕಸಭೆಗೆ ಆರಿಸಿ ಕಳುಹಿಸುವುದು ಅತ್ಯಗತ್ಯ.

ಆದ್ದರಿಂದ ಉಡುಪಿ ಕ್ಷೇತ್ರದ ಪ್ರಜ್ಞಾವಂತ ಎಲ್ಲ ಮತದಾರರೂ ಕಾ. ರಂಗಪ್ಪ ಶ್ರೀಯಾನ್ ಅವರಿಗೆ ತಮ್ಮ ಅಮೂಲ್ಯವಾದ ಮತ ನೀಡಿ ಅವರನ್ನು ಆರಿಸಿ ತರಬೇಕಾಗಿ ವಿನಂತಿ.

# ಕೋಮುವಾದಿ ಬಿ.ಜೆ.ಪಿ. ಯನ್ನು ಸೋಲಿಸಿರಿ

Printed & Published by P Ramachandra Rao by him on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560052 Editoral and managerial office, L-56, K. V. Temple Street, Sultanpet, B-53 Phone : 24154

Editor ; P. Ramachandra Rao Managing Editor : N. K. Upadhyaya